ಹುಬ್ಬಳ್ಳಿ-ಧಾರವಾಡ, ಗದಗ, ಬಾಗಲಕೋಟೆ, ವಿಜಯಪುರ, ಕೊಪ್ಪಳ, ವಿಜಯನಗರ, ಬೆಳಗಾವಿ, ದಾವಣಗೆರೆ, ರಾಯಚೂರ, ಯಾದಗಿರಿ

ಪಬ್ಲಿಕ್ ಫಾಸ್ಟ್ 31

PUBLIC FAST

ಕನ್ನಡ ದಿನಪತ್ರಿಕೆ

ಧ್ವನಿ ನಿಮ್ಮದು ಸಹಾಯ ನಮ್ಮದು... DAILY NEWS PAPER

E-mail : publicfast31@gmail.com

ಸಂಪಾದಕರು : ಐಶ್ವರ್ಯ ಪಿ. ಉಪ ಸಂಪಾದಕರು : ಇಮ್ರಾನ್ ಹೆಬ್ಬಳ್ಳಿ

● ಸಂಪುಟ : 01 ● ಸಂಚಿಕೆ : 121 ● ದಿನಾಂಕ : 19-09-2026 ಶನಿವಾರ KNKAN/26/A2600 ಪುಟ : 4 ಬೆಲೆ : ರೂ. 2 Mobile : 9916890865

ಕರಾವಳಿ ಜಿಲ್ಲೆಗೆ ವಿಶೇಷ ಪ್ಯಾಕೇಜ್





ಬೆಂಗಳೂರು : ಕರಾವಳಿ ಜಿಲ್ಲೆಗಳ ಅಭಿವೃದ್ಧಿಗೆ ವಿಶೇಷ ಆರ್ಥಿಕ ಪ್ಯಾಕೇಜ್‌ನ್ನು ರಾಜ್ಯ ಸರ್ಕಾರ ಘೋಷಣೆ ಮಾಡುವ ಮೂಲಕ ಕರಾವಳಿ ಜಿಲ್ಲೆಗಳ ಅಭಿವೃದ್ಧಿಗೆ ನಾಂದಿ ಹಾಡಿದೆ.

ಇದೇ ಮೊದಲ ಬಾರಿಗೆ ಕರಾವಳಿ ನಗರಿ ಮಂಗಳೂರಿನಲ್ಲಿ ಸಚಿವ ಸಂಪುಟ ಸಭೆ ಇಂದು ನಡೆದಿದ್ದು, ಈ ಸಭೆಯಲ್ಲಿ ಕರಾವಳಿ ಜಿಲ್ಲೆಗಳ ಅಭಿವೃದ್ಧಿಗೆ ಸಂಬಂಧಿಸಿದಂತೆ ಭರಪೂರ ಯೋಜನೆಗಳಿಗೆ ಸರ್ಕಾರ ಒಪ್ಪಿಗೆ ನೀಡಲಿದ್ದು, ಕರಾವಳಿ ಜಿಲ್ಲೆಗಳ ಅಭಿವೃದ್ಧಿಗೆ ವಿಶೇಷ ಆರ್ಥಿಕ ಪ್ಯಾಕೇಜ್ ನೀಡುವುದಕ್ಕೂ ಸಂಪುಟ ಒಪ್ಪಿಗೆ ನೀಡಲಿದೆ ಎಂದು ಹೇಳಲಾಗಿದೆ.

ಕರಾವಳಿ ಭಾಗದ ಆರ್ಥಿಕ, ಸಾಮಾಜಿಕ ಹಾಗೂ ಕೈಗಾರಿಕಾ ಪ್ರಗತಿಗೆ ವೇಗ ನೀಡಲು ಸಚಿವ ಸಂಪುಟವು ಸಮಗ್ರ ಅಭಿವೃದ್ಧಿಯ ನೀಲನಕ್ಷೆಗೂ ಅನುಮೋದನೆ ನೀಡಲಿದೆ ಎಂದು ಹೇಳಲಾಗಿದೆ.

ಮಂಗಳೂರಿನ ಪಡೀಲ್‌ನಲ್ಲಿರುವ ಪ್ರಜಾಸೌಧದಲ್ಲಿ ನಡೆದಿರುವ ಸಂಪುಟ ಸಭೆಯಲ್ಲಿ ಕರಾವಳಿ ಜಿಲ್ಲೆಗಳಿಗೆ ಸಂಬಂಧಿಸಿದ 13 ಪ್ರಮುಖ ಪ್ರಸ್ತಾವನೆಗಳಿದ್ದು, ಈ ಪ್ರಸ್ತಾವನೆಗಳ ಬಗ್ಗೆ ವಿಸ್ತೃತ ಚರ್ಚೆ ಸಂಪುಟದಲ್ಲಿ ನಡೆದು, ಅವುಗಳಿಗೆ ಅನುಮೋದನೆ ಸಿಗುವ ಸಾಧ್ಯತೆಗಳು ಇವೆ. ಕರಾವಳಿ ಜಿಲ್ಲೆಗಳ ಮೂಲ ಸೌಕರ್ಯ, ಬಂದರು ವಿಸ್ತರಣೆ, ಮೀನುಗಾರಿಕೆ ಹಾಗೂ ಪ್ರವಾಸೋದ್ಯಮಕ್ಕೆ ಸಂಬಂಧಿಸಿದ ಪ್ರಮುಖ ಪ್ರಸ್ತಾವನೆಗಳಿಗೂ ಸಂಪುಟದಲ್ಲಿ ಒಪ್ಪಿಗೆ ಸಿಗಲಿದೆ.

ತುಳು ಭಾಷೆಗೆ 2ನೇ ಅಧಿಕೃತ ಭಾಷಾ ಸ್ಥಾನಮಾನ

ತುಳು ನಾಡಿನ ಜನರ ಬಹುದಿನಗಳ ಬೇಡಿಕೆ-ಯಾದ ತುಳು ಭಾಷೆಗೆ ರಾಜ್ಯದ 2ನೇ ಅಧಿಕೃತ ಭಾಷೆಯ ಸ್ಥಾನಮಾನ ಕಲ್ಪಿಸುವ ಬಗ್ಗೆಯೂ ಸಂಪುಟದಲ್ಲಿ ತೀರ್ಮಾನಗಳು ಆಗಲಿವೆ.

ದಕ್ಷಿಣ ಕನ್ನಡ ಜಿಲ್ಲೆಯನ್ನು ಮಂಗಳೂರು ಜಿಲ್ಲೆಯೆಂದು ಮರುನಾಮಕರಣ ಮಾಡುವ ಪ್ರಸ್ತಾವನೆಗೂ ಸಂಪುಟ ಒಪ್ಪಿಗೆ ನೀಡಲಿದೆ ಎಂದು ಹೇಳಲಾಗಿದೆ.

ಕರಾವಳಿಯ ಪ್ರವಾಸೋದ್ಯಮವನ್ನು ಜಾಗತಿಕ ಮಟ್ಟಕ್ಕೆ ತೆಗೆದುಕೊಂಡು ಹೋಗಲು ಅಗತ್ಯವಿರುವ ವಿಶೇಷ ಅನುದಾನವನ್ನು ಒದಗಿಸುವ ಸಂಬಂಧ ಸಂಪುಟದಲ್ಲಿ ತೀರ್ಮಾನಗಳು ಆಗಲಿವೆ.

ಬಂದರು, ವಿಮಾನ ನಿಲ್ದಾಣ ಅಭಿವೃದ್ಧಿ

ಕರಾವಳಿ ಜಿಲ್ಲೆಗಳಲ್ಲಿ ಬಂದರು ಮತ್ತು ವಿಮಾನ ನಿಲ್ದಾಣ ಅಭಿವೃದ್ಧಿಯನ್ನು ಕೈಗೊಳ್ಳಲು ಸಂಪುಟದಲ್ಲಿ ಹಲವಾರು ತೀರ್ಮಾನಗಳು ಆಗಲಿವೆ ಎಂದು ಹೇಳಲಾಗಿದ್ದು, ಕಾರವಾರ ವಿಮಾನ ನಿಲ್ದಾಣದ ಅಭಿವೃದ್ಧಿ ಯೋಜನಾ ವೆಚ್ಚವನ್ನು 250 ಕೋಟಿಗೆ ಹೆಚ್ಚಿಸುವ ಪರಿಷ್ಕೃತ ಪ್ರಸ್ತಾವಕ್ಕೆ ಆಡಳಿತಾತ್ಮಕ ಅನುಮೋದನೆ, ಜತೆಗೆ ಉತ್ತರ ಕನ್ನಡ ಜಿಲ್ಲೆಯ ಮಂಕಿ ಬಂದರಿನಲ್ಲಿ ಬಹು ಉದ್ದೇಶಿತ ಬಂದರು ಹಾಗೂ ಹಡಗು ನಿರ್ಮಾಣ ಅಂಗಣವನ್ನು ಪಿಪಿಪಿ ಮಾದರಿಯಲ್ಲಿ ಸುಮಾರು 6 ಸಾವಿರ ಕೋಟಿ ರೂ. ವೆಚ್ಚದಲ್ಲಿ ಕೈಗೆತ್ತಿಕೊಳ್ಳಲು ಸಂಪುಟ ಒಪ್ಪಿಗೆ ನೀಡಲಿದೆ ಎಂದು ಹೇಳಲಾಗಿದೆ.

ಕಾರವಾರ, ಭಟ್ಕಳ, ಅಂಕೋಲ ತಾಲ್ಲೂಕುಗಳ 7 ದ್ವೀಪಗಳನ್ನು ಸುಮಾರು 300 ಕೋಟಿ ರೂ. ವೆಚ್ಚದಲ್ಲಿ ಪರಿಸರ ಸ್ನೇಹಿ ಪ್ರವಾಸಿ ತಾಣಗಳನ್ನಾಗಿ ರೂಪಿಸಲು ಸಂಪುಟ ಒಪ್ಪಿಗೆ ನೀಡುತ್ತದೆ ಎಂದು ಹೇಳಲಾಗಿದ್ದು, ಉಡುಪಿಯ ಅಯೋಬ ಧರಿಯಾ ಬಹುದೂರ್‌ಗಡ ಮತ್ತು ಮಲ್ಪೆ ದೀಪಗಳನ್ನು ಸುಮಾರು 300 ಕೋಟಿ ವೆಚ್ಚದಲ್ಲಿ ಪ್ರವಾಸಿ ತಾಣಗಳನ್ನಾಗಿ ಅಭಿವೃದ್ಧಿ ಪಡಿಸಲು ಆಡಳಿತಾತ್ಮಕ ಅನುಮೋದನೆಯನ್ನು ಸಂಪುಟ ನೀಡಲಿದೆ.

ಮಂಗಳೂರಿನ ಗುರಪುರ ನದಿ ದ್ವೀಪಗಳನ್ನು ಪಿಪಿಪಿ ಮಾದರಿಯಲ್ಲಿ ಅಭಿವೃದ್ಧಿ ಪಡಿಸುವ ತೀರ್ಮಾನದ ಜತೆಗೆ ಸುಮಾರು 60 ಕೋಟಿ ರೂ. ವೆಚ್ಚದಲ್ಲಿ ಲೈಟ್‌ಹೌಸ್ ಸುತ್ತಲಿನ ಪರಿಸರವನ್ನು ಪ್ರವಾಸೋದ್ಯಮ ಮತ್ತು ಆದಿತ್ಯ ಕೇಂದ್ರವನ್ನಾಗಿ ರೂಪಿಸುವ ಯೋಜನೆಗೂ ಸಂಪುಟ ಒಪ್ಪಿಗೆ ನೀಡಲಿದೆ.

ಕರಾವಳಿ ಜಿಲ್ಲೆಗಳ ಮೂಲಸೌಕರ್ಯ ಅಭಿವೃದ್ಧಿ, ಕುಡಿಯುವ ನೀರು ಸೇರಿದಂತೆ ಹಲವು ಯೋಜನೆಗಳಿಗೂ ಸಂಪುಟ ಇಂದು ಒಪ್ಪಿಗೆ ನೀಡಲಿದ್ದು, ಕೋಟೆಪುರ-ಗೋಳಾರ ಸಂಪರ್ಕ ರಸ್ತೆ, ಕಂದಲೂರ ಸೇತುವೆ, ಮರವೂರು ಸೇತುವೆ, ಕಟೀಲು ಸೇತುವೆ, ಪಾಲಿಮಾರ್ ಸೇತುವೆ ಪುನರ್ ನಿರ್ಮಾಣ ಈ ಮೂಲಭೂತ ಸೌಕರ್ಯ ಯೋಜನೆಗಳಿಗೂ ಸಂಪುಟ ಒಪ್ಪಿಗೆ ನೀಡುವ ಸಾಧ್ಯತೆ ಇದೆ. ಇದರ ಜತೆಗೆ ಮಂಗಳೂರಿನ ಮೊಳವೂರು, ಭಟ್ವಳದ ಕರೋಪಾಡಿ ಮತ್ತು ಸಂಗಬೆಟ್ಟು ವ್ಯಾಪ್ತಿಯ ಬಹುಗ್ರಾಮ ಕುಡಿಯುವ ನೀರಿನ ಯೋಜನೆಗೂ ಸಂಪುಟ ಒಪ್ಪಿಗೆ ನೀಡಲಿದೆ.

ಗ್ರಾಮ ಗ್ರಂಥಾಲಯಗಳನ್ನು ಕಂಪ್ಯೂಟರೀಕರಣಗೊಳಿಸುವ ಸುಮಾರು 57 ಕೋಟಿ ರೂ. ವೆಚ್ಚದ ಯೋಜನೆಗೂ ಸಂಪುಟ ಒಪ್ಪಿಗೆ ನೀಡಲಿದೆ ಎಂದು ಹೇಳಲಾಗಿದೆ.

ಇದರ ಜತೆಗೆ ಕರಾವಳಿ ಜಿಲ್ಲೆಗಳ ಅಭಿವೃದ್ಧಿಗೆ ವೇಗ ನೀಡುವ ಬಗ್ಗೆಯೂ ಸಂಪುಟದಲ್ಲಿ ಚರ್ಚೆ ನಡೆದು ಎಲ್ಲಾ ಯೋಜನೆಗಳನ್ನು ಕಾಲಮಿತಿಯಲ್ಲಿ ಜಾರಿಗೊಳಿಸುವ ಬಗ್ಗೆಯೂ ತೀರ್ಮಾನಗಳಾಗುತ್ತವೆ ಎಂದು ಹೇಳಲಾಗಿದೆ.

ಡಿಕೆಶಿ, ಸಚಿವರಿಗೆ ಅದ್ದೂರಿ ಸ್ವಾಗತ

ಮಂಗಳೂರಿನಲ್ಲಿಂದು ಸಚಿವ ಸಂಪುಟ ಸಭೆ ನಡೆಸಲು ಆಗಮಿಸಿರುವ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸೇರಿದಂತೆ ಸಚಿವ ಸಂಪುಟದ ಎಲ್ಲಾ ಸದಸ್ಯರಿಗೂ ಅದ್ದೂರಿ ಸ್ವಾಗತ ಕೋರಲಾಗಿದೆ.

ಮಂಗಳೂರಿನ ಪಡೀಲ್‌ನಲ್ಲಿರುವ ಪ್ರಜಾಸೌಧದಲ್ಲಿ ನಡೆದ ಸಚಿವ ಸಂಪುಟ ಸಭೆಗೂ ಮುನ್ನ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ಎಲ್ಲಾ ಸಚಿವರು ಇತಿಹಾಸ ಪ್ರಸಿದ್ಧ ಕದ್ರಿ ದೇವಸ್ಥಾನದಲ್ಲಿ ಮಂಜುನಾಥ ದೇವರಿಗೆ ವಿಶೇಷ ಪೂಜೆ ಸಲ್ಲಿಸಿದರು.

ಕದ್ರಿ ಮಂಜುನಾಥ ದೇವಾಲಯದಿಂದ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸೇರಿದಂತೆ ಎಲ್ಲಾ ಸಚಿವರನ್ನು ತೆರೆದ ಅಂಬಾರಿ ಬಸ್‌ನಲ್ಲಿ ಪಡೀಲ್ ವರೆಗೂ ಮೆರವಣಿಗೆಯಲ್ಲಿ ಕರೆ ತರಲಾಯಿತು.

ರಣಬಿಸಿಲಿನಲ್ಲೂ ಉತ್ಸಾಹದಲ್ಲಿದ್ದ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮತ್ತು ಸಚಿವರುಗಳು ಪಂಪ್‌ವೆಲ್‌ನಿಂದ ಪ್ರಜಾಸೌಧದವರೆಗೂ ನಡೆದ ಮೆರವಣಿಗೆಯಲ್ಲಿ ಜನರತ್ತ ಕೈ ಬೀಸುತ್ತಾ ಸಾಗಿದ್ದು ವಿಶೇಷವಾಗಿತ್ತು.

ಕೆಲ ಸಚಿವರುಗಳು ಬಿಸಿಲಿನ ರಕ್ಷಣೆಗೆ ತಲೆಗೆ ಬಿಳಿ ಟೋಪಿಯನ್ನು ಹಾಕಿಕೊಂಡಿದ್ದರು.

ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ಸಚಿವರುಗಳಿಗೆ ಅಂಬಾರಿ ಬಸ್‌ನಲ್ಲಿ ಮೆರವಣಿಗೆಯಲ್ಲಿ ಸಾಗಿದ ಸಂದರ್ಭದಲ್ಲಿ ರಸ್ತೆಯ ಎರಡೂ ಬದಿಗಳಲ್ಲೂ ನಿಂತಿದ್ದ ಕಾಂಗ್ರೆಸ್ ಕಾರ್ಯಕರ್ತರು, ಸಾರ್ವಜನಿಕರು ಜೈಕಾರದ ಘೋಷಣೆಗಳನ್ನು ಕೂಗಿದರು.

ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದ ಕರಾವಳಿಯ ಚಂಡೆವಾದನ, ಹುಲಿವೇಷ, ಗಾರುಡಿ ಗೊಂಬೆಗಳು, ಕೊರಗರ ಕೊಳಲು ವಾದನ, ಬ್ಯಾಂಡ್ ವಾದ್ಯ ಇವೆಲ್ಲಾ ಮೆರವಣಿಗೆಗೆ ಕಳೆ ತಂದವು.

ಮಂಗಳೂರಿನಲ್ಲಿ ರಾಜ್ಯ ಸರ್ಕಾರ

ಮಂಗಳೂರಿನಲ್ಲಿ ಇಂದು ನಡೆದಿರುವ ಸಂಪುಟ ಸಭೆಯಲ್ಲಿ ಪಾಲ್ಗೊಳ್ಳಲು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸೇರಿದಂತೆ ಸಚಿವ ಸಂಪುಟದ ಎಲ್ಲಾ ಸಚಿವರು ವಾಸ್ತವ್ಯ ಹೂಡಿದ್ದು, ಇಡೀ ಸರ್ಕಾರವೇ ಮಂಗಳೂರಿನಲ್ಲಿದೆ.

ಇಂದಿನ ಸಂಪುಟ ಸಭೆಯಲ್ಲಿ ಪಾಲ್ಗೊಳ್ಳಲು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ನಿನ್ನೆಯೇ ಮಂಗಳೂರಿಗೆ ಆಗಮಿಸಿದ್ದರು. ನಿನ್ನೆ ಅವರು ಮಂಗಳೂರಿನ ಜನಪ್ರತಿನಿಧಿಗಳಿಗೆ ಔತಣಕೂಟವನ್ನು ಆಯೋಜಿಸಿದ್ದರು.

ಹಾಗೆಯೇ ವಿವಿಧ ಕಾರ್ಯಕ್ರಮಗಳಲ್ಲೂ ಅವರು ಪಾಲ್ಗೊಂಡು ಯುವಜನರ ಜತೆ ಸಂವಾದವನ್ನು ನಡೆಸಿದರು.

ಸಮಾರೋಪ ಸಮಾರಂಭ



ನವಲಗುಂದ : ಖುಷಿ ಮುನಿಗಳು, ಸಂತರು ಸಾಧಕರು ಮೌನ ಅನುಷ್ಠಾನ ನಡೆಸುವ ಮೂಲಕ ಮಾನವ ಕುಲ ಉನ್ನತಿಗೆ ಶ್ರಮಿಸುತ್ತಾ ಬಂದಿರುವುದು ಸನಾತನ ಸಂಸ್ಕೃತಿಯ ಸಂಪ್ರದಾಯವಾಗಿದ್ದು ಗವಿಮಠದ ಬಸವಲಿಂಗ ಸ್ವಾಮಿಗಳೂ ನಿರಂತರವಾಗಿ ಮೌನಾನುಷ್ಠಾನ ಕೈಗೊಳ್ಳುವುದರೊಂದಿಗೆ ಭಕ್ತರ ಹಾಗೂ ಧರ್ಮದ ಏಳ್ಗೆಗೆ ಶ್ರಮಿಸುತ್ತಿರುವುದು ಇತರರಿಗೆ ಮಾದರಿಯಾಗಿದೆ ಎಂದು ಹಂಸನೂರ ಹಾಗೂ ಗೋಗೇರಿಮಠದ ಸಿದ್ದಲಿಂಗ ಸ್ವಾಮೀಜಿ ನುಡಿದರು.

ಸ್ಥಳೀಯ ಗವಿಮಠದ ದಾಸೋಹ ಭವನದಲ್ಲಿ ಶ್ರೀ ಮಠದ ಬಸವಲಿಂಗ ಸ್ವಾಮೀಜಿಯವರು ಶ್ರಾವಣ ಮಾಸದ ನಿಮಿತ್ತ ಹಮ್ಮಿಕೊಂಡಿದ್ದ ಒಂದು ತಿಂಗಳ ಮೌನಾನುಷ್ಠಾನ ಮಂಗಲೋತ್ಸವ ಸಮಾರೋಪ ಸಮಾರಂಭದ ಸಾನ್ನಿಧ್ಯ ವಹಿಸಿ ಮಾತನಾಡಿದರು.

ಅಗಡಿ-ಗುತ್ತಲ ಪ್ರಭುಸ್ವಾಮಿ ಮಠದ ಗುರುಸಿದ್ದ ಸ್ವಾಮಿಜಿ.ಯಲಬುರ್ಗಿ ಹಿರೇಮಠದ ಬಸವಲಿಂಗ ಶಿವಾಚಾರ್ಯ ಸ್ವಾಮೀಜಿ ಮಾತನಾಡಿದರು.

ಅನುಷ್ಠಾನ ನಿರತ ಗವಿಮಠದ ಬಸವಲಿಂಗಸ್ವಾಮಿಜಿ ಮಾತನಾಡಿ ಸ್ವಾಮಿಗಳಾದವರು ದೇಹ ಹಾಗೂ ಮನಸ್ಸುಗಳನ್ನು ಅನುಷ್ಠಾನ ರೂಪದಲ್ಲಿ ಹಿಡಿದಿಟ್ಟುಕೊಂಡು ನಾಡಿನ ಭಕ್ತರ. ರೈತರ ಅಭಿವೃದ್ದಿಗಾಗಿ ಭಗವಂತನಲ್ಲಿ ಬೇಡಿಕೊಂಡು ಎಲ್ಲ ಜನಾಂಗದವರೂ ಸೌಹಾರ್ದಯುತವಾಗಿ ನಡೆದುಕೊಳ್ಳುವ ಮೂಲಕ ಸಮಬಾಳು ಬಾಳಲೆಂಬ ಉದ್ದೇಶ ಮೌನಾನುಷ್ಠಾನದ ಅಂಶವಾಗಿದೆ ಎಂದರು.

ಗುಡ್ಡದಾನ್ವೇರಿಯ ಶಿವಯೋಗೀಶ್ವರ ಸ್ವಾಮೀಜಿ, ಜಿಗೇರಿ ಹಿರೇಮಠದ ಗುರುಸಿದ್ದೇಶ್ವರ ಶಿವಾಚಾರ್ಯ ಸ್ವಾಮೀಜಿ, ನಂಜುಂಡ ಪಂಡಿತಾರಾಧ್ಯ ಸ್ವಾಮೀಜಿ, ಪಂಡಿತ ವಾಗೀಶಾರಾಧ್ಯ ಸ್ವಾಮೀಜಿ , ಕುಕನೂರಿನ ಮಹದೇವ ಸ್ವಾಮೀಜಿ , ಅಕ್ಕಿಆಲೂರಿನ ಶಿವಬಸವ ಸ್ವಾಮೀಜಿ ವೇದಿಕೆ ಮೇಲಿದ್ದರು.


ಅಣ್ಣಪ್ಪ ಬಾಗಿ ಸ್ವಾಗತಿಸಿದರು, ದೇವರಾಜ ದಾಡಿಭಾವಿ, ರೋಹಣ ಮುನೇನಕೊಪ್ಪ, ಸಿದ್ದಲಿಂಗಯ್ಯ ಹಿರೇಮಠ, ಈರಣ್ಣ ಚವಡಿ,ಸಂತೋಷ ನಾವಳ್ಳಿ, ನಿಂಗಪ್ಪ ತೋಟದ, ಶಂಭು ಸಿದ್ರಾಮಶೆಟ್ಟರ, ಎಸ್ ಬಿ ಹೂಗಾರ, ಅನೀಲ ಶಿದ್ರಾಮಶೆಟ್ಟರ, ಬೂದಪ್ಪ ಬಾಗಲಕೋಟಿ, ಬಸಲಿಂಗಯ್ಯ ಪೂಜಾರ, ಜೀವನ ಪವಾರ, ಮಲ್ಲಪ್ಪ ಚಿನ್ನಾಟಗಿ, ಬಸಪ್ಪ ಹಂಚಿನಾಳ, ಸಿದ್ದು ಪೂಜಾರ, ಎಸ್.ಎ.ಬಾರಕೇರ ಸೇರಿದಂತೆ ಅಕ್ಕಮಹಾದೇವಿ ಹಾಗೂ ಶ್ರೀ ದಾನಮ್ಮದೇವಿ ಮಹಿಳಾ ಮಂಡಳ ಸದಸ್ಯರು ಹಾಗೂ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಅಪಾರ ಭಕ್ತ ಸಮೂಹ ಅನುಷ್ಠಾನ ನಿರತ ಶ್ರೀಬಸವಲಿಂಗ ಸ್ವಾಜಿಜಿಯವರನ್ನು ಸತ್ಕರಿಸಿದರು.

ಹುಬ್ಬಳ್ಳಿಯಿಂದ ಮಂತ್ರಾಲಯಕ್ಕೆ ಎಸಿ ಸ್ಲೀಪರ್ ಬಸ್ ಸಂಚಾರ ಆರಂಭ

ಹುಬ್ಬಳ್ಳಿ : ಮಂತ್ರಾಲಯದ ರಾಘವೇಂದ್ರ ಸ್ವಾಮಿ ದರ್ಶನಕ್ಕೆ ತೆರಳುವ ಭಕ್ತರಿಗೆ ಹಾಗೂ ಇತರೆ ಪ್ರಯಾಣಿಕರ ಅನುಕೂಲಕ್ಕಾಗಿ ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯು ಹುಬ್ಬಳ್ಳಿ?ಮಂತ್ರಾಲಯ ನಡುವೆ ಪ್ರತಿದಿನ ತಡೆರಹಿತ ಎಸಿ ಸ್ಲೀಪರ್ ಬಸ್ ಸಂಚಾರ ಆರಂಭಿಸಿದೆ.

ಗೋಕುಲ ರಸ್ತೆ ಕೇಂದ್ರ ಬಸ್ ನಿಲ್ದಾಣದಿಂದ ರಾತ್ರಿ 8.30ಕ್ಕೆ ಹೊರಡಲಿದೆ. ಗದಗ ಹೊಸ ಬಸ್ ನಿಲ್ದಾಣ(ರಾತ್ರಿ 10.5), ಕೊಪ್ಪಳ ಕೇಂದ್ರ ಬಸ್ ನಿಲ್ದಾಣ(ರಾತ್ರಿ 11.20) ಹಾಗೂ ಹೊಸಪೇಟೆ, ಬಳ್ಳಾರಿ, ಆದೋನಿ ಮಾರ್ಗವಾಗಿ ಮಂತ್ರಾಲಯಕ್ಕೆ ಮಾರನೇ ದಿನ ಬೆಳಿಗ್ಗೆ 5ಕ್ಕೆ ತಲುಪಲಿದೆ. ಅಲ್ಲಿಂದ ರಾತ್ರಿ 9.30ಕ್ಕೆ ಹೊರಡುವ ಬಸ್ ಮಾರನೇ ದಿನ ಬೆಳಿಗ್ಗೆ 6ಕ್ಕೆ ಹುಬ್ಬಳ್ಳಿ ತಲುಪಲಿದೆ. ಹುಬ್ಬಳ್ಳಿಯಿಂದ ಮಂತ್ರಾಲಯಕ್ಕೆ ?762 ಹಾಗೂ ಗದಗದಿಂದ ಮಂತ್ರಾಲಯಕ್ಕೆ ?678 ನಿಗದಿಪಡಿಸಲಾಗಿದೆ ಎಂದು ವಿಭಾಗೀಯ ನಿಯಂತ್ರಣಾಧಿಕಾರಿ ಎಚ್. ರಾಮನಗೌಡರ ತಿಳಿಸಿದ್ದಾರೆ.

ಅಭಿಯಂತರರು ಸಮಾಜದ ಅಭಿವೃದ್ಧಿಗೆ ಹೊಸ ದಿಕ್ಕು ನೀಡಲಿ



ಧಾರವಾಡ : ಅಭಿಯಂತರರು ಕೇವಲ ಕಟ್ಟಡ, ರಸ್ತೆ ಹಾಗೂ ಸೇತುವೆಗಳನ್ನು ನಿರ್ಮಿಸುವುದಕ್ಕೆ ಸೀಮಿತವಾಗದೆ, ಸಮಾಜದ ಅಗತ್ಯಗಳನ್ನು ಅರಿತು ಗುಣಮಟ್ಟದ ಹಾಗೂ ಶಾಶ್ವತ ಅಭಿವೃದ್ಧಿಗೆ ಹೊಸ ದಿಕ್ಕು ನೀಡಬೇಕು ಎಂದು ಧಾರವಾಡ ಗ್ರಾಮೀಣ ಶಾಸಕ ವಿನಯ ಕುಲಕರ್ಣಿ ಹೇಳಿದರು.

ನಗರದ ಇನ್ಸಿ ?ಟಟ್ಯೂಟ್ ಆಫ್ ಇಂಜಿನಿಯರ್ಸ್ ಆವರಣದ ಪುತ್ಥಳಿಯ ಪಕ್ಕದಲ್ಲಿ ಅಸೋಸಿಯೇಷನ್ ಆಫ್ ಕನ್ಸಲ್ಟಿಂಗ್ ಸಿವಿಲ್ ಇಂಜಿನಿಯರ್ಸ್,, ಲೋಕಲ್ ಸೆಂಟರ್ ಧಾರವಾಡ ಮತ್ತು ಎಸಿಸಿಇ ಇಂಡಿಯಾ ಧಾರವಾಡ ಸೆಂಟರ್ ವತಿಯಿಂದ ಆಯೋಜಿಸಿದ್ದ ಸರ್ ಎಂ. ವಿಶ್ವೇಶ್ವರಯ್ಯ ಅವರ 166ನೇ ಜನ್ಮದಿನದ ಅಂಗವಾಗಿ ಅಭಿಯಂತರರ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿ ಸರ್ ಎಂ. ವಿಶ್ವೇಶ್ವರಯ್ಯ ಅವರು ತಮ್ಮ ತಾಂತ್ರಿಕ ಜ್ಞಾನ, ಶಿಸ್ತು, ಪ್ರಾಮಾಣಿಕತೆ ಹಾಗೂ ದೂರದೃಷ್ಟಿಯ ಮೂಲಕ ದೇಶದ ಅಭಿವೃದ್ಧಿಗೆ ಅಪಾರ ಕೊಡುಗೆ ನೀಡಿದ್ದಾರೆ. ಅವರ ಸಾಧನೆಗಳು ಇಂದಿನ ಪೀಳಿಗೆಯ ಅಭಿಯಂತರರಿಗೆ ಸ್ಫೂರ್ತಿಯಾಗಬೇಕು. ಬದಲಾಗುತ್ತಿರುವ ಕಾಲಘಟ್ಟದಲ್ಲಿ ಆಧುನಿಕ ತಂತ್ರಜ್ಞಾನವನ್ನು ಅಳವಡಿಸಿಕೊಂಡು ಜನಸಾಮಾನ್ಯರಿಗೆ ಅನುಕೂಲವಾಗುವಂತಹ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವುದು ಅಭಿಯಂತರರ ಪ್ರಮುಖ ಜವಾಬ್ದಾರಿಯಾಗಿದೆ ಎಂದರು.

ಈ ಸಂದರ್ಭದಲ್ಲಿ ಸರ್ ಎಂ. ವಿಶ್ವೇಶ್ವರಯ್ಯ ಅವರ ಭಾವಚಿತ್ರಕ್ಕೆ ಗಣ್ಯರು ಹಾಗೂ ಎಸಿಸಿಇ ಪದಾಧಿಕಾರಿಗಳು ಮಾಲಾರ್ಪಣೆ ಮಾಡಿ ಗೌರವ ಸಲ್ಲಿಸಿದರು. ಬಳಿಕ ಅಭಿಯಂತರರ ಮೆರವಣಿಗೆ ನಡೆಯಿತು.

ಎಸಿಸಿಇ, ಲೋಕಲ್ ಸೆಂಟರ್ ಧಾರವಾಡದ ಅಧ್ಯಕ್ಷ ಇಂ. ಸುನೀಲ ಬಾಗೇವಾಡಿ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಕಾರ್ಯದರ್ಶಿ ಇಂ. ಸಿದ್ದನಗೌಡ ಕೆ. ಪಾಟೀಲ, ಉಪಾಧ್ಯಕ್ಷ ಅರುಣಕುಮಾರ ಶೀಲವಂತ, ಖಜಾಂಚಿ ಕಬೀರ ನದಾಫ, ಕೃಷ್ಣಾ ಯಲಿಗಾರ, ಸುಮೀತ ಸುಣಗಾರ, ರಾಕೇಶ ಪಾಟೀಲ, ರಾಜು ಇಟಗಿ, ಮಹೇಶ ಮಠದ, ಶ್ರೀಕಾಂತ ಗಾಯಕವಾಡ, ಅಲ್ತಾಫ್ ಅಲಿ ಹತ್ತಿಮತ್ತೂರ, ಸಂಜಯ ಕಬ್ಬೂರ, ಪವನ್ ಬೆಟಗೇರಿ, ವಿಜಯೇಂದ್ರಗೌಡ ಪಾಟೀಲ, ಪವನಕುಮಾರ ಬೆಟಗೇರಿ, ರಿಯಾಜ್ ಕರಿಕಟ್ಟಿ ಸೇರಿದಂತೆ ಎಸಿಸಿಇ ಇಂಡಿಯಾದ ಅಧ್ಯಕ್ಷ ಬಸವರಾಜ ಖಣದಾಳೆ, ಖಜಾಂಚಿ ಎಂ ಎಂ ಅಬ್ಬಿಹಾಳ, ಉಪಾಧ್ಯಕ್ಷ ದೇವರಾಜ ಕಂಬಳಿ, ಪದಾಧಿಕಾರಿಗಳು, ಸದಸ್ಯರು ಹಾಗೂ ಅನೇಕ ಅಭಿಯಂತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಬೀಳ್ಕೊಡುಗೆ ಸಮಾರಂಭ



ನವಲಗುಂದ : ಪಟ್ಟಣದ ಪೊಲೀಸ್ ಠಾಣೆಯಲ್ಲಿ ಮೂರು ವರ್ಷ ಪಿಎಸ್‌ಐ ಆಗಿ ಸೇವೆ ಸಲ್ಲಿಸಿದ ಜನಾರ್ಧನ ಭಟ್ರಳ್ಳಿ ಅವರು ಕರ್ತವ್ಯದಲ್ಲಿ ಚಾಣಾಕ್ಷ ಬುದ್ದಿವಂತ ವ್ಯಕ್ತಿಯಾಗಿದ್ದರು' ಎಂದು ಸಿಪಿಐ ರವಿಕುಮಾರ ಕಪ್ಪತನವರ ತಿಳಿಸಿದರು.

ನವಲಗುಂದ ಪೊಲೀಸ್ ಠಾಣೆಯಿಂದ ಅಣ್ಣಿಗೇರಿ ಠಾಣೆಗೆ ವರ್ಗಾವಣೆಗೊಂಡ ಪಿಎಸ್‌ಐ ಜನಾರ್ಧನ ಭಟ್ರಳ್ಳಿ ಅವರ ಬೀಳ್ಕೊಡುಗೆ ಸಮಾರಂಭದ ಅಧ್ಯಕ್ಷತೆವಹಿಸಿ ಮಾತನಾಡಿದರು.

ನೂತನ ಪಿಎಸ್‌ಐ ಚಂದ್ರಶೇಖರ ಸಾಗನೂರ ಮಾತನಾಡಿ ಸಾರ್ವಜನಿಕರು ಭಯಬಿಟ್ಟು ಮುಕ್ತವಾಗಿ ಠಾಣೆಗೆ ಬಂದು ಸಮಸ್ಯೆ ಪರಿಹರಿಸಿಕೊಂಡು, ಧೈರ್ಯವಾಗಿ ತೆರಳಬೇಕು ನಾನು ಹೆಚ್ಚಿಗೆ ಮಾತನಾಡುವುದಿಲ್ಲ. ಬದಲಿಗೆ ನನ್ನ ಕೆಲಸ ಮಾತನಾಡಬೇಕು, ಹಾಗೆ ಕೆಲಸ ಮಾಡಲು ಇಚ್ಚಿಸುತ್ತೇನೆ.

ಬೀಳ್ಕೊಡುಗೆ ಸನ್ಮಾನ ಸ್ವೀಕರಿಸಿದ ಪಿಎಸ್‌ಐ ಜನಾರ್ಧನ ಭಟ್ರಳ್ಳಿ ಮಾತನಾಡಿ ಠಾಣಾ ವ್ಯಾಪ್ತಿಯಲ್ಲಿನ ಕಳ್ಳತನ ಪತ್ತೆ ಹಚ್ಚುವಲ್ಲಿ ಇಲಾಖೆ ನೀಡಿದ ಸಹಕಾರ ಸ್ಮರಿಸುವೆ. ನವಲಗುಂದ ಉತ್ತಮ ರೀತಿಯಲ್ಲಿ ಕೆಲಸ ನಿರ್ವಹಿಸಲು ಸಾರ್ವಜನಿಕರು ನೀಡಿದ ಸಹಕಾರ ಕಾರಣ, ಮುಂದೆಯೂ ಸಹ ಚಂದ್ರಶೇಖರ ಅವರು ಉತ್ತಮ ರೀತಿ ಕೆಲಸ ಮಾಡಲು ನಮ್ಮೆಲ್ಲ ಸಿಬ್ಬಂದಿ ಹೆಚ್ಚಿನ ಸಹಕಾರ ನೀಡಿ ಎಂದರು.

ಎಎಸ್‌ಐ ಬಿ ಆರ್ ಭಜಂತ್ರಿ, ವಿಜಯ ಸಲಕಿ, ಸಂಜೀವ ಮರಾಠಿ, ಪಾರುಕ್ ನದಾಫ್, ಸಲೀಮ್ ಮತ್ತೆಖಾನ, ಜಗದೀಶ ಬೆಳಹಾರ, ಕಾಂತೇಶ ಹಳ್ಳಿಕೇರಿ, ಜಗದೀಶ ಬರಿಗಾಲ, ಕವಿತಾ ಮೊರಬದ, ಚನ್ನಮ್ಮ, ನೇತ್ರಾ ಕಾಡಾಪುರ, ರೂಪಾ ನಾವಿ, ಪ್ರತಿಭಾ ಮಾದರ ಸೇರಿ ಠಾಣಾ ಸಿಬ್ಬಂದಿಗಳೆಲ್ಲರೂ ಉಪಸ್ಥಿತರಿದ್ದರು.

ಹಿಂದೂ-ಮುಸ್ಲಿಂ ಬಾಂಧವರಿಂದ ಗಣಪತಿ ಪ್ರತಿಷ್ಠಾಪನೆ



ನವಲಗುಂದ : ಗಣೇಶೋತ್ಸವದ ಅಂಗವಾಗಿ ಪಟ್ಟಣದ ಗಾಂಧಿ ಮಾರುಕಟ್ಟೆ ಹಿಂದೂಮುಸ್ಲಿಂ ಬಾಂಧವರು ಒಗ್ಗೂಡಿ ಭಾನುವಾರ ಗಣಪತಿ ಮೂರ್ತಿಯನ್ನು ಪ್ರತಿಷ್ಠಾಪಿಸುವ ಮೂಲಕ ಧಾರ್ಮಿಕ ಸೌಹಾರ್ದತೆ ಹಾಗೂ ಸಹೋದರತ್ವದ ಸಂದೇಶ ಸಾರಿದರು.

ಗಣಪತಿ ಪ್ರತಿಷ್ಠಾಪನಾ ಕಾರ್ಯಕ್ರಮದಲ್ಲಿ ಎರಡೂ ಸಮುದಾಯದ ಬಾಂಧವರು ಪಾಲ್ಗೊಂಡು ಪರಸ್ಪರ ಶುಭಾಶಯ ವಿನಿಮಯ ಮಾಡಿಕೊಂಡರು. ಎಲ್ಲರೂ ಶಾಂತಿ, ಸೌಹಾರ್ದತೆ ಹಾಗೂ ಪರಸ್ಪರ ಗೌರವದಿಂದ ಹಬ್ಬ ಆಚರಿಸಿದ ಈ ವಿಶೇಷ ಕಾರ್ಯಕ್ರಮ ಸಾರ್ವಜನಿಕರ ಗಮನ ಸೆಳೆಯಿತು. ಧರ್ಮ ಭಿನ್ನವಾದರೂ ಮಾನವೀಯತೆ ಒಂದೇ ಎಂಬ ಸಂದೇಶ ಸಾರಿದ ಈ ಕಾರ್ಯಕ್ರಮ ಭಾವೈಕ್ಯತೆಗೆ ಮಾದರಿಯಾಯಿತು.

ಕರ್ನಾಟಕ ಬೀದಿ ಬದಿ ವ್ಯಾಪಾರಿಗಳ ಒಕ್ಕೂಟದ ತಾಲ್ಲೂಕು ಅಧ್ಯಕ್ಷ ರಿಯಾಜ್ ನಾಶಿಪುಡಿ, ಮಲ್ಲಪ್ಪ ಬೆಂಡಿಗೇರಿ, ಮಹಮ್ಮದಅಲಿ ಭಗವಾನ, ಫಾರಿದ ಜಿಗಳೂರು, ರೇಣವ್ವ ಬೆಂಡಿಗೇರಿ, ಅಬ್ದುಲ ಸುರ್ಪುರ, ಉಮೇಶ ಬೆಂಡಿಗೇರಿ, ದಾವಲಬಿ ಹುಗ್ಗಿ, ಅನಂತ ಕುಂಕುಮಗಾರ, ಇರ್ಫಾನ್ ಭಗವಾನ, ಅಲ್ಲಾಸಾಬ್ ನದಾಫ, ಚಾಂದಸಾಬ ಕಲ್ಲುಟ್ರಿ, ರೈಮಾನ ಸಿರಿ ಸೇರಿದಂತೆ ನೂರಾರು ಜನ ಪಾಲ್ಗೊಂಡಿದ್ದರು.

PUBLIC FAST KANNADA DAILY NEWS PAPER

ಪುಸ್ತಕಗಳು ದಿನನಿತ್ಯದ ಗೆಳೆಯರಾಗಲಿ: ಕುಲಸಚಿವ ಸೋಮಲಿಂಗ ಗೆಣ್ಣೂರ



ವಿಜಯಪುರ: ಪುಸ್ತಕಗಳು ನಮ್ಮ ದಿನನಿತ್ಯದ ಗೆಳೆಯರಾಗಬೇಕು. ಪುಸ್ತಕಗಳೊಂದಿಗಿನ ಒಡನಾಟದಿಂದ ಕೇವಲ ಜೀವಿಯಾಗಿರುವ ಮನುಷ್ಯನಲ್ಲಿ ಮಾನವೀಯತೆ, ವೈಚಾರಿಕತೆ ಹಾಗೂ ಸಾಮಾಜಿಕಪ್ರಜ್ಞೆಬೆಳೆದುಆತನಿಜವಾದಮನುಷ್ಯನಾಗಿ ರೂಪುಗೊಳ್ಳಲು ಸಾಧ್ಯ ಎಂದು ಬಾಗಲಕೋಟೆ ವಿಶ್ವವಿದ್ಯಾಲಯದ ಕುಲಸಚಿವ ಹಾಗೂ ವಿಜಯಪುರ ಜಿಲ್ಲೆಯ ಮಾಜಿ ಅಪರ ಜಿಲ್ಲಾಧಿಕಾರಿ ಸೋಮಲಿಂಗ ಗೆಣ್ಣೂರ ಹೇಳಿದರು.

ವಿಜಯಪುರದ ನವರಸಪುರದಲ್ಲಿರುವ ನೇತ್ರ ತಜ್ಞ ಡಾ. ಪ್ರಕಾಶ ಪರಣಾಕರ ಅವರ ನಿವಾಸದಲ್ಲಿ ಭಾನುವಾರ ನಡೆದ ‘ಮನೆಗೊಂದು ಗ್ರಂಥಾಲಯ’ ಅನುಷ್ಠಾನ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡಿದ ಅವರು, ಪ್ರತಿಯೊಂದು ಉತ್ತಮ ಪುಸ್ತಕದೊಳಗೂ ನಮ್ಮೊಂದಿಗೆ ಸಂವಾದ ನಡೆಸುವ ಒಂದು ವ್ಯಕ್ತಿತ್ವ ಮತ್ತು ಮನಸ್ಸು ಅಡಗಿರುತ್ತದೆ ಎಂದರು.

ದಿಕ್ಕು ತಪ್ಪಿಸುವ, ಮೌಢ್ಯ ಹಾಗೂ ಕಂದಾಚಾರವನ್ನು ಬಿತ್ತುವ ಪುಸ್ತಕಗಳನ್ನು ದೂರವಿಟ್ಟು, ವೈಚಾರಿಕತೆ, ವೈಜ್ಞಾನಿಕ ಮನೋಭಾವ ಮತ್ತು ಮಾನವೀಯ ಮೌಲ್ಯಗಳನ್ನು ಬೆಳೆಸುವ ಪುಸ್ತಕಗಳನ್ನು ಓದುವ ಅಭ್ಯಾಸ ಬೆಳೆಸಿಕೊಳ್ಳಬೇಕು. ಪ್ರತಿಯೊಂದು ಮನೆಯಲ್ಲೂ ಪುಸ್ತಕಗಳಿಗೆ ಸ್ಥಾನ ಕಲ್ಪಿಸುವ ಮೂಲಕ ಜ್ಞಾನಸಂಪನ್ನ ಸಮಾಜ ನಿರ್ಮಿಸಲು ಸಾಧ್ಯ ಎಂದು ಹೇಳಿದರು.

ಮುಖ್ಯ ಅತಿಥಿ ಡಾ. ಮಹಾಂತೇಶ ಬಿರಾದಾರ ಮಾತನಾಡಿ, ಒಂದು ಉತ್ತಮ ಪುಸ್ತಕ ಓದುವುದು ಎಂದರೆ ಬಸವಣ್ಣನ ಸಮಸಮಾಜದ ಆಶಯವನ್ನು ಮುನ್ನಡೆಸುವ ಪ್ರಯತ್ನದಂತಾಗಿದೆ.

ಪುಸ್ತಕಓದುವಅನುಭವವುಹೊಸಜಗತ್ತಿನಪರಿಚಯ ಮಾಡಿಕೊಡುವುದರ ಜೊತೆಗೆ, ಸಹೃದಯರೊಂದಿಗೆ ಕೈಗೊಳ್ಳುವ ಜ್ಞಾನಯಾತ್ರೆಯಾಗಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕನ್ನಡ ಪುಸ್ತಕ ಪ್ರಾಧಿಕಾರದ ಜಿಲ್ಲಾ ಜಾಗೃತಿ ಸಮಿತಿ ಸದಸ್ಯ ಪ್ರೊ. ಬಸವರಾಜ ಜಾಲವಾದಿ ಮಾತನಾಡಿ, ಪುಸ್ತಕ ಓದುವವನು ಒಂದೇ ಜನ್ಮದಲ್ಲಿ ಸಾವಿರ ಜೀವನಗಳನ್ನು ಕಾಣಬಲ್ಲ; ಪುಸ್ತಕ ಓದದವನು ಒಂದು ಜನ್ಮದಲ್ಲಿ ಒಂದೇ ಜೀವನವನ್ನು ಅನುಭವಿಸಬಲ್ಲ’ ಎಂಬ ಮಾತನ್ನು ಉಲ್ಲೇಖಿಸಿ ಪುಸ್ತಕ ಓದಿನ ಮಹತ್ವವನ್ನು ವಿವರಿಸಿದರು.

ಬುದ್ಧ, ಬಸವಣ್ಣ ಹಾಗೂ ಡಾ. ಬಿ.ಆರ್. ಅಂಬೇಡ್ಕರ್ ಅವರಂತಹ ಮಹನೀಯರ ಚಿಂತನೆಗಳು ಪುಸ್ತಕಗಳ ಓದಿನಿಂದ ಮತ್ತಷ್ಟು ವಿಸ್ತಾರಗೊಂಡವು. ‘ಇವನಾರವ, ಇವನಾರವ’ ಎನ್ನದೆ ‘ಇವ ನಮ್ಮವ, ಇವ ನಮ್ಮವ’ ಎಂಬ ಸಮಾನತೆಯ ಮನೋಭಾವ ಬೆಳೆಸುವುದೇ ಓದಿನ ಸಾರ್ಥಕತೆ ಎಂದು ಹೇಳಿದರು.

ಕಾರ್ಯಕ್ರಮದ ಕೊನೆಯಲ್ಲಿ ಆಶೀರ್ವಚನ ನೀಡಿದ ಕಕಮರಿ ಗುರುದೇವಾಶ್ರಮದ ಪರಮಪೂಜ್ಯ ಶ್ರೀ ಆತ್ಮಾರಾಮ ಮಹಾಸ್ವಾಮಿಗಳು, ಮನೆಗೊಂದು ಗ್ರಂಥಾಲಯ’ ಕಾರ್ಯಕ್ರಮವು ಆದರ್ಶಪ್ರಾಯವಾಗಿದ್ದು, ಪ್ರತಿಯೊಂದು ಮನೆಯಲ್ಲೂ ಇಂತಹ ಕಾರ್ಯಕ್ರಮಗಳು ನಡೆಯಬೇಕು.

ಪುಸ್ತಕಗಳ ಮೇಲಿನ ಪ್ರೀತಿ ಮತ್ತು ಓದುವ ಹವ್ಯಾಸವನ್ನು ಬೆಳೆಸುವ ಮೂಲಕ ಸಮಾಜವನ್ನು ಅಜ್ಞಾನವೆಂಬ ಕತ್ತಲೆಯಿಂದ ಜ್ಞಾನದ ಬೆಳಕಿನತ್ತ ಕೊಂಡೊಯ್ಯಬಹುದು ಎಂದರು.

ವೇದಿಕೆಯಲ್ಲಿ ಯರಡೋಣದ ಕುಮಾರೇಶ್ವರ ಸ್ವಾಮಿಗಳು, ಪ್ರಗತಿಪರ ರೈತರಾದ ಮಲ್ಲಿಕಾರ್ಜುನ ಹಂಜಗಿ, ಶ್ರೀಧರ ಮುರಾಳೆ, ಕಬ್ಬೂರಿನ ಬಾಬೂರಾವ್ ಮಹಾರಾಜ್ ಹಾಗೂ ಆಸ್ಟ್ರೇಲಿಯಾದಿಂದ ಆಗಮಿಸಿ ವಚನ ಪಠಣ ಮಾಡಿದ ವೀರೇಶ ಹಿರೇಮಠ ಉಪಸ್ಥಿತರಿದ್ದರು. ಜಿಲ್ಲಾ ಜಾಗೃತಿ ಸಮಿತಿ ಸದಸ್ಯ ಬಸವರಾಜ ಸಾಲವಾಡಗಿ ಕಾರ್ಯಕ್ರಮ ನಿರ್ವಹಿಸಿದರು. ಸಹಪ್ರಾಧ್ಯಾಪಕ ಬಸವರಾಜ ಬೆಳಗಲಿ ವಚನ ಗಾಯನದ ಮೂಲಕ ಸ್ವಾಗತಿಸಿದರು. ಸಿದ್ಧಾರ್ಥ ಪರಣಾಕರ ವಂದಿಸಿದರು.

ಕಾರ್ಯಕ್ರಮದ ಕೊನೆಯಲ್ಲಿ ಕನ್ನಡ ಪುಸ್ತಕ ಪ್ರಾಧಿಕಾರದ ವತಿಯಿಂದ ಡಾ. ಪ್ರಕಾಶ ಪರಣಾಕರ ಹಾಗೂ ಅವರ ಪತ್ನಿಯನ್ನು ಶಾಲು ಹೊದಿಸಿ ಸನ್ಮಾನಿಸಿ ಅಭಿನಂದಿಸಲಾಯಿತು.

ಯತ್ನಾಳ ಬಾಯಿಗೆ ಬಂದಂತೆ ಮಾತನಾಡುವುದನ್ನು ನಿಲ್ಲಿಸಲಿ: ಎಂ.ಬಿ. ಪಾಟೀಲ್

ವಿಜಯಪುರ:ಸಿದ್ದರಾಮಯ್ಯ ಅವರನ್ನು ಮುಖ್ಯಮಂತ್ರಿಸ್ಥಾನದಿಂದಬದಲಾಯಿಸಲು ಜಮೀರ್ ಅಹ್ಮದ್ ಖಾನ್, ಸತೀಶ ಜಾರಕಿಹೊಳಿ ಹಾಗೂ ತಾವು ವಿರೋಧ ವ್ಯಕ್ತಪಡಿಸಿದ್ದೇವೆ.

ಸಿದ್ದರಾಮಯ್ಯ ಅವರಿಗೆ ಬೆಂಬಲ ನೀಡದೇ 36 ಶಾಸಕರ ಸಹಿ ಸಂಗ್ರಹಿಸಲಾಗಿದೆ ಎಂಬ ವಿಜಯಪುರ ನಗರ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರ ಹೇಳಿಕೆ ಸಂಪೂರ್ಣ ಸುಳ್ಳು ಎಂದು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ್ ತಿರುಗೇಟು ನೀಡಿದರು.

ವಿಜಯಪುರ ನಗರದಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಯತ್ನಾಳ ಅವರ ಹೇಳಿಕೆ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

ಮಲ್ಲಿಕಾರ್ಜುನ ಖರ್ಗೆ ಹಾಗೂ ಸಿದ್ದರಾಮಯ್ಯ ಅವರು ನಮ್ಮ ಉನ್ನತ ನಾಯಕರು. ಹಿಂದೆಯೂ, ಈಗಲೂ, ಮುಂದೆಯೂ ಅವರೇ ನಮ್ಮ ನಾಯಕರು. ಸಿದ್ದರಾಮಯ್ಯ ಮುಖ್ಯಮಂತ್ರಿ ಆಗಿರಲಿ, ಆಗದೇ ಇರಲಿ ಅವರ ನಾಯಕತ್ವದಲ್ಲಿ ನಮಗೆ ವಿಶ್ವಾಸವಿದೆ” ಎಂದು ಎಂ.ಬಿ. ಪಾಟೀಲ್ ಸ್ಪಷ್ಟಪಡಿಸಿದರು.

ಕಾಂಗ್ರೆಸ್ ಪಕ್ಷದಲ್ಲಿ ಮುಖ್ಯಮಂತ್ರಿ ಬದಲಾವಣೆಗಾಗಿ ಶಾಸಕರಿಂದ ಸಹಿ ಸಂಗ್ರಹಿಸುವ ಯಾವುದೇ ಪದ್ಧತಿಯಿಲ್ಲ. ಸಿದ್ದರಾಮಯ್ಯ ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ಬದಲಾಯಿಸುವ ವಿಚಾರವೇನಾದರೂ ಇದ್ದರೆ ಅದು ಹೈಕಮಾಂಡ್‌ನ ನಿರ್ಧಾರವಾಗಿರುತ್ತದೆ. ಶಾಸಕರ ಸಹಿ ಸಂಗ್ರಹಿಸಲಾಗಿದೆ ಎಂಬ ಯತ್ನಾಳ ಅವರ ಆರೋಪಕ್ಕೆ ಯಾವುದೇ ಆಧಾರವಿಲ್ಲ ಎಂದರು. ಸ್ಥಳೀಯಸುದ್ದಿ

ರಾಹುಲ್ ಗಾಂಧಿ ಸಿದ್ದರಾಮಯ್ಯ ಜತೆ ಮಾತನಾಡಿದ್ದಾರೆ

ಸ್ವತಃ ರಾಹುಲ್ ಗಾಂಧಿಯವರೇ ಸಿದ್ದರಾಮಯ್ಯ ಅವರು ಚುನಾವಣಾ ರಾಜಕೀಯದಿಂದ ಹಿಂದೆ ಸರಿಯಬಾರದು ಎಂದು ಹೇಳಿದ್ದಾರೆ. ಸಿದ್ದರಾಮಯ್ಯ ಅವರನ್ನು ಕರೆಯಿಸಿಕೊಂಡು ರಾಹುಲ್ ಗಾಂಧಿ ಅವರೊಂದಿಗೆ ಮಾತನಾಡಿದ್ದಾರೆ. ಹೀಗಿರುವಾಗ ಯತ್ನಾಳ ಅವರು



ಆಧಾರರಹಿತ ಹೇಳಿಕೆಗಳನ್ನು ನೀಡುತ್ತಿರುವುದು ಸರಿಯಲ್ಲ ಎಂದು ಪಾಟೀಲ್ ಹೇಳಿದರು.

ಯತ್ನಾಳ ಅವರಿಗೆ ಬಾಯಿಗೆ ಬಂದಂತೆ ಮಾತನಾಡುವುದೇ ಚಾಳಿಯಾಗಿದೆ. ಅವರು ಬಕಾಸುರನಂತೆ ಮಾತನಾಡುತ್ತಾರೆ. ಇಂತಹ ಹೇಳಿಕೆಗಳನ್ನು ನೀಡುವುದನ್ನು ನಿಲ್ಲಿಸಬೇಕು” ಎಂದು ವಾಗ್ದಾಳಿ ನಡೆಸಿದರು.

ಸಿದ್ದರಾಮಯ್ಯ–ಸತೀಶ ನಡುವೆ ಭಿನ್ನಾಭಿಪ್ರಾಯವಿಲ್ಲ

ಸಿದ್ದರಾಮಯ್ಯ ಹಾಗೂ ಸತೀಶ ಜಾರಕಿಹೊಳಿ ನಡುವೆ ಯಾವುದೇ ಭಿನ್ನಾಭಿಪ್ರಾಯಗಳಿಲ್ಲ. ರಾಜಕೀಯದಲ್ಲಿ ಸಣ್ಣಪುಟ್ಟ ಮುನಿಸುಗಳು, ಅಭಿಪ್ರಾಯ ವ್ಯತ್ಯಾಸಗಳು ಸಹಜ. ಅವುಗಳನ್ನು ದೊಡ್ಡ ಭಿನ್ನಾಭಿಪ್ರಾಯವೆಂದು ಬಿಂಬಿಸುವ ಅಗತ್ಯವಿಲ್ಲ. ಎಲ್ಲವೂ ಸರಿಯಾಗಿದೆ ಎಂದು ಎಂ.ಬಿ. ಪಾಟೀಲ್ ಹೇಳಿದರು.

ಜಮೀರ್ ಅಹ್ಮದ್ ಖಾನ್ ಹಾಗೂ ಸತೀಶ ಜಾರಕಿಹೊಳಿ ಅವರು ಸಿದ್ದರಾಮಯ್ಯ ವಿರುದ್ಧ ಯಾವುದೇ ರೀತಿಯ ಅಭಿಯಾನ ನಡೆಸಿಲ್ಲ.

ದಾವಣಗೆರೆ ಉಪಚುನಾವಣೆ ವಿಚಾರದಲ್ಲಿ ಜಮೀರ್ ಅಹ್ಮದ್ ಹಾಗೂ ಸಿದ್ದರಾಮಯ್ಯ ನಡುವೆ ಗೊಂದಲ ಉಂಟಾಗಿದ್ದು ನಿಜ. ಆದರೆ ಅದನ್ನು ಪಕ್ಷದೊಳಗಿನ ದೊಡ್ಡ ಬಿಕ್ಕಟ್ಟಾಗಿ ನೋಡಬಾರದು ಎಂದರು.

ನನಗೆ ಹೊಗಳಿಸಿಕೊಳ್ಳುವ ಖಯಾಲಿ ಇಲ್ಲ’

ಹಿಂದೆ ಯತ್ನಾಳ ಅವರು ತಮ್ಮನ್ನು ಹೊಗಳಿಸಿಕೊಳ್ಳಲು ಎಂ.ಬಿ. ಪಾಟೀಲ್ ತಮ್ಮನ್ನುಕರೆಸಿಕೊಂಡಿದ್ದರು ಎಂದು ಹೇಳಿಕೆ ನೀಡಿದ್ದರು.

ಇದಕ್ಕೆ ಪ್ರತಿಕ್ರಿಯಿಸಿದ ಪಾಟೀಲ್, “ನನಗೆ ಹೊಗಳಿಸಿಕೊಳ್ಳುವ ಯಾವುದೇ ಖಯಾಲಿ ಇಲ್ಲ.

ನಡೆದಾಡುವ ದೇವರು ಎಂದೇ ಗೌರವಿಸಲ್ಪಟ್ಟಿದ್ದ ದಿವಂಗತ ಶ್ರೀ ಸಿದ್ದೇಶ್ವರ ಸ್ವಾಮೀಜಿಯವರು ನನ್ನನ್ನು ಹೊಗಳಿದ್ದಾರೆ. ನನಗೆ ನೊಬೆಲ್ ಪ್ರಶಸ್ತಿಗಿಂತ ಶ್ರೀಗಳ ಮಾತು ದೊಡ್ಡದು” ಎಂದು ಹೇಳಿದರು.

ಯತ್ನಾಳಗೆ ವಿಧಾನ ಪರಿಷತ್ ಗೆಲ್ಲಲು ನಾವು ನೆರವಾಗಿದ್ದೆವು’

ಯತ್ನಾಳ ಅವರ ರಾಜಕೀಯ ನಡೆ ಕುರಿತು ಪ್ರಸ್ತಾಪಿಸಿದ ಪಾಟೀಲ್, ಯತ್ನಾಳ ಅವರು ಜೆಡಿಎಸ್‌ನಲ್ಲಿದ್ದಾಗ ನಮಾಜ್ ಮಾಡಿದ್ದರು, ತಲೆಗೆ ಟೋಪಿ ಹಾಕಿಕೊಂಡಿದ್ದರು ಎಂದು ಟೀಕಿಸಿದರು.

ಬಿಜೆಪಿಯಿಂದ ಹೊರಬಂದ ಸಂದರ್ಭದಲ್ಲಿ ತಾವೂ ಸೇರಿದಂತೆ ಹಲವರು ಯತ್ನಾಳ ಅವರಿಗೆ ಬೆಂಬಲ ನೀಡಿತ್ತು. ವಿಧಾನ ಪರಿಷತ್ ಚುನಾವಣೆಯಲ್ಲಿ ಸಹಾಯ ಮಾಡುವಂತೆ ಯತ್ನಾಳ ಅವರೇ ತಮ್ಮ ಬಳಿ ಬಂದು ಮನವಿ ಮಾಡಿದ್ದರು. ಬಿಜೆಪಿ ಅಭ್ಯರ್ಥಿಯನ್ನು ಸೋಲಿಸಲು ನಾವೆಲ್ಲರೂ ಸೇರಿ ಎರಡನೇ ಪ್ರಾಶಸ್ತ್ಯದ ಮತಗಳನ್ನು ಯತ್ನಾಳ ಅವರಿಗೆ ನೀಡಿ ಗೆಲ್ಲಿಸಿದ್ದೇವೆ ಎಂದು ಹೇಳಿದರು.

ಕೋಮುವಾದಿ ಬಿಜೆಪಿ ಅಭ್ಯರ್ಥಿಯನ್ನು ಸೋಲಿಸಲು ಯತ್ನಾಳ ಅವರಿಗೆ ಬೆಂಬಲಿಸಿ ಗೆಲ್ಲಿಸಿದ್ದನ್ನು ಅವರು ಮರೆಯಬಾರದು. ಆದರೆ ಇಂದು ಅದೇ ವಿಚಾರವನ್ನು ಮರೆತು ನಮ್ಮ ವಿರುದ್ಧ ಮಾತನಾಡುತ್ತಿದ್ದಾರೆ” ಎಂದು ಪಾಟೀಲ್ ಆರೋಪಿಸಿದರು.

ಯಡಿಯೂರಪ್ಪ ವಿರುದ್ಧವೇ ತಿರುಗಿಬಿದ್ದಿದ್ದರು

ವಿಧಾನ ಪರಿಷತ್ ಸದಸ್ಯರಾದ ಬಳಿಕ ಬಿ.ಎಸ್. ಯಡಿಯೂರಪ್ಪ ಅವರ ಸಹಾಯದಿಂದ ಯತ್ನಾಳ ಅವರು ಮತ್ತೆ ಬಿಜೆಪಿಗೆ ಸೇರ್ಪಡೆಯಾದರು.

ಜಗದೀಶ ಶೆಟ್ಟರ್, ಪ್ರಹ್ಲಾದ್ ಜೋಶಿ ಸೇರಿದಂತೆ ಹಲವರು ಯತ್ನಾಳ ಅವರ ಬಿಜೆಪಿಗೆ ವಾಪಸಾತಿಯನ್ನು ವಿರೋಧಿಸಿದ್ದರು.

ಆದರೂ ಯಡಿಯೂರಪ್ಪ ಅವರು ಅವರನ್ನು ಪಕ್ಷಕ್ಕೆ ಸೇರಿಸಿಕೊಂಡರು.

ನಂತರ ಅದೇ ಯಡಿಯೂರಪ್ಪ ಅವರ ವಿರುದ್ಧ ಯತ್ನಾಳ ತಿರುಗಿಬಿದ್ದರು. “ಅವರಂತೆ ನಾನು ಇಲ್ಲ. ಸಿದ್ದರಾಮಯ್ಯ ನಮ್ಮ ನಾಯಕರು. ಹಿಂದೆಯೂ, ಇಂದೂ, ಮುಂದೆಯೂ ಅವರೇ ನಮ್ಮ ನಾಯಕರು” ಎಂದು ಎಂ.ಬಿ. ಪಾಟೀಲ್ ಪುನರುಚ್ಚರಿಸಿದರು.

ಇನ್ನು ಹೀಗೆ ಮಾತನಾಡಿದರೆ ಬೇರೆ ದಾರಿ’

ವಿಧಾನ ಪರಿಷತ್ ಚುನಾವಣೆಯಲ್ಲಿ ಯತ್ನಾಳ ಅವರಿಗೆ ಬೆಂಬಲ ನೀಡಿದ್ದಕ್ಕಾಗಿ ತಾವು ಅಪಪ್ರಚಾರ ಎದುರಿಸುವಂತಾಗಿತ್ತು. ಆದರೂ ರಾಜಕೀಯ ಪರಿಸ್ಥಿತಿಯಲ್ಲಿ ತೆಗೆದುಕೊಂಡ ನಿರ್ಧಾರವನ್ನು ಈಗ ತಪ್ಪೆಂದು ಭಾವಿಸುವುದಿಲ್ಲ ಎಂದರು.

ಯತ್ನಾಳ ಅವರು ಈ ರೀತಿಯ ಮಾತುಗಳನ್ನು ಮುಂದುವರಿಸುವುದನ್ನು ನಿಲ್ಲಿಸಬೇಕು. ಇಲ್ಲವಾದರೆ ನಾವು ಬೇರೆ ದಾರಿ ಹಿಡಿಯಬೇಕಾಗುತ್ತದೆ” ಎಂದು ಎಂ.ಬಿ. ಪಾಟೀಲ್ ಎಚ್ಚರಿಕೆ ನೀಡಿದರು.

ಬಿ.ಕೆ. ಹರಿಪ್ರಸಾದ್ ಅವರೇ ‘ಸುಪ್ರೀಂ’: ಎಂ.ಬಿ. ಪಾಟೀಲ

ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ಅವರು ಪಕ್ಷದಲ್ಲಿ ‘ಸುಪ್ರೀಂ’ ಇದ್ದಂತೆ. ಪಕ್ಷದ ರಾಜ್ಯಾಧ್ಯಕ್ಷರು ಹಾಗೂ ಮುಖ್ಯಮಂತ್ರಿಗಳಿಗಿಂತಲೂ ಅವರು ಹಿರಿಯರು. ಹೀಗಾಗಿ ಅವರಿಗೆ ಎಲ್ಲ ರೀತಿಯ ಗೌರವ ನೀಡಲೇಬೇಕು ಎಂದು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಹೇಳಿದರು.

ರಾಜ್ಯ ಸರ್ಕಾರ ತಮ್ಮನ್ನು ಸರಿಯಾಗಿ ನಡೆಸಿಕೊಂಡಿಲ್ಲ ಎಂಬ ಕಾರಣ–ಕ್ಕೆ ಬಿ.ಕೆ. ಹರಿಪ್ರಸಾದ್ ಅವರು ಅಸಮಾಧಾನಗೊಂಡಿದ್ದಾರೆ ಎಂಬ ವಿಚಾರದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ ಎಂದರು.

ಬಿ.ಕೆ. ಹರಿಪ್ರಸಾದ್ ಅವರು ನಮ್ಮ ಪಕ್ಷದ ಕ್ಯಾಪ್ಟನ್. ಪಕ್ಷದ ವಿಚಾರದಲ್ಲಿ ಮುಖ್ಯಮಂತ್ರಿಗಿಂತಲೂ ಅವರು ಹಿರಿಯರು.

ಹೀಗಾಗಿ ಅವರಿಗೆ ಎಲ್ಲ ರೀತಿಯ ಗೌರವ ನೀಡಬೇಕಾಗುತ್ತದೆ. ಇದರಲ್ಲಿ ಎರಡು ಮಾತಿಲ್ಲ” ಎಂದು ಎಂ.ಬಿ. ಪಾಟೀಲ ಸ್ಪಷ್ಟಪಡಿಸಿದರು.

ಹರಿಪ್ರಸಾದ್ ಅವರ ಸ್ಥಾನಮಾನ ಹಾಗೂ ಪಕ್ಷದೊಳಗಿನ ಹಿರಿಯತನವನ್ನು ಗೌರವಿಸುವುದು ಪ್ರತಿಯೊಬ್ಬರ ಜವಾಬ್ದಾರಿ ಎಂದು ಅವರು

ಮಕ್ಕಳಲ್ಲಿ ಉತ್ತಮ ಸಂಸ್ಕೃತಿ, ಮೌಲ್ಯಗಳನ್ನು ಬೆಳೆಸಿ; ಏಕನಾಥ

ರಾಣೆಬೆನ್ನೂರು: ‘ಧಾರ್ಮಿಕ ಆಚರಣೆಗಳು ಕೇವಲ ಪೂಜೆಗಳಿಗೆ ಸೀಮಿತವಾಗದೆ, ಮಕ್ಕಳಲ್ಲಿ ಸತ್ಯ, ಪ್ರಾಮಾಣಿಕತೆ, ಶಿಸ್ತು, ಮಾನವೀಯ ಮೌಲ್ಯಗಳನ್ನು ಹೆಚ್ಚಿಸಬೇಕು. ಗ್ರಾಮೀಣ ಭಾಗದ ಮಕ್ಕಳಿಗೂ ಗುಣಮಟ್ಟದ ಶಿಕ್ಷಣ ದೊರೆಯಬೇಕು. ಪಾಲಕರು ಸರ್ಕಾರಿ ಶಾಲೆಗಳತ್ತ ಹೆಚ್ಚಿನ ಒತ್ತು ನೀಡುವ ಮೂಲಕ ಮಕ್ಕಳ ಶೈಕ್ಷಣಿಕ ಪ್ರಗತಿಗೆ ಸಹಕಾರ ನೀಡಬೇಕು’ ಎಂದು ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ಏಕನಾಥ ಬಾನುವಳ್ಳಿ ಹೇಳಿದರು. ತಾಲ್ಲೂಕಿನ ಗುಡಗೂರು ಗ್ರಾಮದಲ್ಲಿ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಈಚೆಗೆ ಆಯೋಜಿಸಿದ್ದ ಗಂಗಾಪುರ ವಲಯಮಟ್ಟದ ಸಾಮೂಹಿಕ ಸತ್ಯನಾರಾಯಣ ಪೂಜೆ ಹಾಗೂ ಧಾರ್ಮಿಕ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.ಯೋಜನೆಯ ಜಿಲ್ಲಾ ನಿರ್ದೇಶಕ ಅಶೋಕ ಇದ್ದರು.

ಶೇ. 95ರಷ್ಟು ಇ.ಡಿ ದಾಳಿಗಳು ಇಂಡಿಯಾ ಒಕ್ಕೂಟದ ನಾಯಕರ ಮೇಲೆಯೇ ಆಗಿವೆ : ಸಚಿವ ಲಕ್ಷ್ಮಣ ಸವದಿ



ಅಥಣಿ : ದೇಶದಲ್ಲಿ ತನಿಖಾ ಸಂಸ್ಥೆಗಳಾದ ಜಾರಿ ನಿರ್ದೇಶನಾಲಯ (ಇಡಿ) ನಡೆಸಿರುವ ದಾಳಿಗಳ ಪೈಕಿ ಶೇಕಡಾ 95ರಷ್ಟು ದಾಳಿಗಳು ಎನ್‌ಡಿಎ ಯೇತರ ವಿರೋಧ ಪಕ್ಷಗಳ ನಾಯಕರ ಮೇಲೆಯೇ ನಡೆದಿವೆ.

ವಿರೋಧ ಪಕ್ಷದ ಮುಖಂಡರನ್ನು ಬೆದರಿಸಿ ತಮ್ಮ ಪಕ್ಷಕ್ಕೆ ಸೆಳೆಯುವುದು ಹಾಗೂ ವಿಪಕ್ಷಗಳ ನೈತಿಕ ಸ್ಥೈರ್ಯ ಕುಗ್ಗಿಸುವುದೇ ಈ ದಾಳಿಗಳ ಹಿಂದಿರುವ ಮುಖ್ಯ ಹುನ್ನಾರ ಎಂದು ಮಾಜಿ ಉಪಮುಖ್ಯಮಂತ್ರಿ ಹಾಗೂ ಸಹಕಾರ ಸಚಿವ ಲಕ್ಷ್ಮಣ ಸವದಿ ಎಂದು ಹೇಳಿದರು.

ಅವರು ಅಥಣಿ ತಾಲೂಕಿನ ಝುಂಜರವಾಡ ಗ್ರಾಮದಲ್ಲಿ ಮಸೀದಿ ಅಭಿವೃದ್ಧಿ ಕಾಮಗಾರಿಗಳಿಗೆ ಭೂಮಿಪೂಜೆ ನೆರವೇರಿಸಿ ನಂತರ ಮಾಧ್ಯಮ ಜೊತೆಗೆ ಮಾತನಾಡಿದರು.

ದೇಶದಲ್ಲಿ ಮತ್ತು ರಾಜ್ಯಮಟ್ಟದಲ್ಲಿ ನಡೆಯುತ್ತಿರುವ ಇ.ಡಿ ದಾಳಿಗಳನ್ನು

ಸೂಕ್ಷ್ಮವಾಗಿ ಗಮನಿಸಿದರೆ, ಶೇ. 95ಕ್ಕಿಂತ ಹೆಚ್ಚು ದಾಳಿಗಳು ವಿರೋಧ ಪಕ್ಷದ ನಾಯಕರ ಮೇಲೆಯೇ ಸಂಭವಿಸಿವೆ. ಎನ್‌ಡಿಎ ಮೈತ್ರಿಕೂಟಕ್ಕೆ ಸೇರದ, ‘ಇಂಡಿಯಾ’ ಒಕ್ಕೂಟದ ಪ್ರಮುಖ ನಾಯಕರನ್ನೇ ಉದ್ದೇಶಪೂರ್ವಕವಾಗಿ ಗುರಿಯಾಗಿಸಿಕೊಂಡು ತನಿಖಾ ಸಂಸ್ಥೆಗಳನ್ನುಛೂಬಿಡಲಾಗುತ್ತಿದೆ. ಈ ಕುರಿತು ಇಂದು ಇಡೀ ರಾಷ್ಟ್ರಮಟ್ಟದಲ್ಲಿ ಗಂಭೀರ ಚರ್ಚೆಗಳು ನಡೆಯುತ್ತಿವೆ, ಎಂದು ಕಿಡಿಕಾರಿದರು.

ಇ.ಡಿ ದಾಳಿಗಳು ಕಾಂಗ್ರೆಸ್ ಪಕ್ಷವನ್ನು ಮಣಿಸುವುದಕ್ಕೋ ಅಥವಾ ನಾಯಕರನ್ನು ಬಿಜೆಪಿಗೆ ಸೆಳೆಯುವುದಕ್ಕೋ ಎಂಬ ಮಾಧ್ಯಮಗಳ ಪ್ರಶ್ನೆಗೆ ಉತ್ತರಿಸಿದ ಅವರು, ಇದರಲ್ಲಿ ಎರಡೂ ಒಳಾರ್ಥಗಳು ಅಡಗಿವೆ. ಒಂದೆಡೆ ನಾಯಕರನ್ನು ಕೇಸು ಮತ್ತು ತನಿಖೆಗಳ ಹೆಸರಿನಲ್ಲಿ ಹೆದರಿಸಿ, ಬೆದರಿಸಿ ತಮ್ಮ ಪಕ್ಷ–ಕ್ಕೆ ಸೆಳೆದುಕೊಳ್ಳುವ ಕೆಲಸ ನಡೆ–ಯುತ್ತಿದೆ.

ಇನ್ನೊಂದೆಡೆ, ಬಿಜೆಪಿ ಅಥವಾ ಎನ್‌ಡಿಎ ಸೇರಲು ನಿರಾಕರಿಸುವ ಮುಖಂಡರ ಹಾಗೂ ಅವರ ಪಕ್ಷದ ಆತ್ಮಸ್ಥೈರ್ಯವನ್ನು ಸಂಪೂರ್ಣವಾಗಿ ಕುಗ್ಗಿಸುವ ಷಡ್ಯಂತ್ರ ಇದರ ಹಿಂದಿದೆ. ಈ ಎರಡು ಸ್ಪಷ್ಟ ಉದ್ದೇಶಗಳಿಂದಲೇ ಇಂತಹದಾಳಿಗಳುನಿರಂತರವಾಗಿ ಮುಂದುವರಿದಿವೆ, ಎಂದು ನೇರವಾಗಿ ಆಪಾದಿಸಿದರು.

ಬರ ಘೋಷಣೆ ಮತ್ತು ವಿದ್ಯುತ್ ಸಮಸ್ಯೆ ಕುರಿತು ಸ್ಪಷ್ಟನೆ : ಇದೇ ವೇಳೆ ಜಿಲ್ಲೆಯ ಬರಗಾಲ ಪರಿಸ್ಥಿತಿ ಕುರಿತು ಮಾತನಾಡಿದ ಅವರು, ಬೆಳಗಾವಿ ಜಿಲ್ಲೆಯ ತಾಲೂಕುಗಳು ಮೊದಲ ಹಂತದ ಬರ ಪಟ್ಟಿಯಲ್ಲಿ ಸೇರದಿರಲು ಕೇಂದ್ರ ಸರ್ಕಾರ ನಡೆಸಿದ ಉಪಗ್ರಹ ಚಿತ್ರಗಳಲ್ಲಿ (ಸೆಟಲೈಟ್ ಮ್ಯಾಪಿಂಗ್) ಕಂಡುಬಂದ ಕಬ್ಬು ಮತ್ತು ತೋಟಗಾರಿಕೆ ಬೆಳೆಗಳ ಹಸಿರು ಕಾರಣವೇ ಹೊರತು ರಾಜ್ಯ ಸರ್ಕಾರದ ನಿರ್ಲಕ್ಷ್ಯವಲ್ಲ ಎಂದರು.

ಮಳೆ ಕೊರತೆ ಮುಂದುವರಿದರೆ ಸೆಪ್ಟೆಂಬರ್ 18–19ರ ನಂತರ ಎರಡನೇ ಹಂತದಲ್ಲಿ ಜಿಲ್ಲೆಯ ತಾಲೂಕುಗಳು ಬರಪೀಡಿತ ಪಟ್ಟಿಗೆ ಸೇರಲಿವೆ ಎಂದು ತಿಳಿಸಿದರು. ಅಲ್ಲದೆ, ಮಳೆ ಕೊರತೆಯಿಂದಾಗಿ ರಾಜ್ಯದಲ್ಲಿ ವಿದ್ಯುತ್ ಉತ್ಪಾದನೆ ಕುಸಿದಿದ್ದು, ಅಥಣಿ ತಾಲೂಕಿಗೆ ಬೇಕಾಗುವ ವಿದ್ಯುತ್ ಕೊರತೆಯನ್ನು ನಿವಾರಿಸಲು ಹೊರಗಿನಿಂದ ವಿದ್ಯುತ್ ಖರೀದಿಸಿ ಸರಬರಾಜು ಮಾಡಲು ಸರ್ಕಾರ ಚಿಂತನೆ ನಡೆಸಿದೆ ಎಂದು ಸವದಿ ಸ್ಪಷ್ಟಪಡಿಸಿದರು

ಇದೆ ಸಂದರ್ಭದಲ್ಲಿ ಅಣ್ಣಸಾಬ ಪರಪ್ಪ ಸಂಕೋನಟ್ಟಿ, ಅಪ್ಪಸಾಬ ಪಾಟೀಲ, ಮೈನುಸಾಬ ಮೀರಾಗೊಳ , ಲಾಲಾಸಾಬ ಅನ್ನಸೀರಿ, ಮುತ್ತಣ್ಣ ಹಿಡಕಲ , ಶಿವಾನಂದ ಮಲೇವಾಡಿ, ಬಾಬು ಪಾಟೀಲ, ಭೂಪಾಲ ಹಳಿಂಗಳಿ, ಅಣ್ಣಸಾಬಯಂಡೋಳ್ಳಿ,ಬೀಮಪ್ಪ ಸಂಕೋನಟ್ಟಿ, ಶಿವಪ್ಪ ನೇಮಗೌಡ, ಹುಸೇನ ಮೀರಾಗೋಳ, ಬಂದು ಅನ್ನಸಿರಿ ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

ಎಂ.ಬಿ.ಪಾಟೀಲರ ದಮ್ಕಿಗೆ ಅಂಜಲ್ಲ: ಯತ್ನಾಳ ತಿರುಗೇಟು

ವಿಜಯಪುರ: ‘ಎಂ.ಬಿ.ಪಾಟೀಲರ ದಮ್ಕಿಗೆ ಅಂಜಿ ನಾನು ಎಂದೂ ರಾಜಕಾರಣ ಮಾಡಿಲ್ಲ. ಯಡಿಯೂರಪ್ಪಗೇ ಅಂಜಿಲ್ಲ, ಇನ್ನು ಎಂ.ಬಿ.ಪಾಟೀಲರಿಗೆ ಅಂಜಿ ರಾಜಕೀಯ ಮಾಡ್ತೀನಾ? ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ತಿರುಗೇಟು ನೀಡಿದರು.

ನಗರದಲ್ಲಿ ಮಂಗಳವಾರ ಸುದ್ದಿಗಾರರೊಂದಿಗೆಮಾತನಾಡಿದಅವರು, ‘ಮುಂದಿನ ಚುನಾವಣೆಯಲ್ಲಿ ನನ್ನನ್ನು ಸೋಲಿಸ್ತೀನಿ ಎನ್ನುವ ಎಂ.ಬಿ.ಪಾಟೀಲರ ಮಾತನ್ನು ವಿಜಯಪುರದ ಹಿಂದುಗಳು ಕೇಳಲ್ಲ, ಇಂತಹ 10 ಎಂ.ಬಿ.ಪಾಟೀಲರು ಬಂದರೂ ಏನೂ ಆಗಲ್ಲ. ಅದನ್ನು ತಲೆಯಿಂದ ಬಿಟ್ಟುಬಿಡಿ’ ಎಂದು ತಿರುಗೇಟು ನೀಡಿದರು.

ಎಂ.ಬಿ.ಪಾಟೀಲರು ತಮ್ಮ ಪಕ್ಕದಲ್ಲಿ ಸೋತ ಅಭ್ಯರ್ಥಿಯನ್ನು ಕೂರಿಸಿಕೊಂಡು ಪತ್ರಿಕಾಗೋಷ್ಠಿ ಮಾಡಿದ್ರಲ್ಲ, ಅಂತವರು ವಿಜಯಪುರಎಂಎಲ್‌ಎಆದ್ರೆಗತಿಯೇನು? ಅಂತವರನ್ನು ಆಯ್ಕೆ ಮಾಡಲು ವಿಜಯಪುರ ಜನ ಹುಚ್ಚರಿದ್ದರೇನು’ ಎಂದು ಪ್ರಶ್ನಿಸಿದರು.

1994ರಲ್ಲಿ ನಾನು ಶಾಸಕನಾಗಿ ಪ್ರಥಮ ಬಾರಿಗೆಆರಿಸಿಬಂದಾಗಎಂ.ಬಿ.ಪಾಟೀಲರು ಚುನಾವಣೆಯನ್ನು ಮೈಮೇಲೆ ಹಾಕಿಕೊಂಡು ಮಾಡಿದ್ದಾರೇನು’ ಎಂದು ಪ್ರಶ್ನಿಸಿದರು.

ಸಚಿವ ಎಂ.ಬಿ.ಪಾಟೀಲ ಅವರು ವಿಧಾನಸಭೆ ಚುನಾವಣೆಯಲ್ಲಿ ಬಿ.ಎಸ್. ಯಡಿಯೂರಪ್ಪ, ಬಿ.ವೈ.ವಿಜಯೇಂದ್ರಗೆ ರೊಕ್ಕ ಕೊಟ್ಟು ಬಬಲೇಶ್ವರ ಕ್ಷೇತ್ರ–ಕ್ಕೆ ಬಿಜೆಪಿಯಿಂದ ಪ್ರತಿ ಬಾರಿ ವೀಕ್ ಕ್ಯಾಂಡಿಟೇಟ್ ಹಾಕಿಸಿಕೊಳ್ಳುತ್ತಾರೆ’ ಎಂದು ಆರೋಪಿಸಿದರು.

ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಗ್ರಾಮ ಪಂಚಾಯಿತಿ ಸದಸ್ಯರ ವಿವೇಚನೆಯಿಂದ ನಾನು ವಿಧಾನ ಪರಿಷತ್ ಚುನಾವಣೆಯಲ್ಲಿ ಆಯ್ಕೆಯಾಗಿದ್ದೇನೆಯೇ ಹೊರತು, ಎಂ.ಬಿ.ಪಾಟೀಲರಿಂದ ಅಲ್ಲ.



ಯತ್ನಾಳಗೆ ವೋಟ್ ಹಾಕಿ ಎಂದು ಎಂ.ಬಿ.ಪಾಟೀಲ ಯಾರಿಗಾದರೂ ಹೇಳಿದ್ದರೇನು’ ಎಂದು ಪ್ರಶ್ನಿಸಿದರು.

ನಾನು ಸ್ವಂತ ಹೋರಾಟದಿಂದ ರಾಜಕೀಯಕ್ಕೆ ಬಂದವನು. ಅಟಲ್ ಬಿಹಾರಿ ವಾಜಪೇಯಿ ಆದರ್ಶ ನೋಡಿ ಬಿಜೆಪಿಗೆ ಬಂದವನು, ಯಡಿಯೂರಪ್ಪನ ಸೊಂಡಿ ನೋಡಿ ರಾಜಕೀಯಕ್ಕೆ ಬಂದಿಲ್ಲ’ ಎಂದರು.

ವಿಜಯಪುರಕ್ಕೆ ಯಡಿಯೂರಪ್ಪ ಏನು ಸುಡುಗಾಡು ಕೊಟ್ಟಿಲ್ಲ, ಅದೇನಿದ್ದರೂ ಬಬಲೇಶ್ವರಕ್ಕೆ ಎಂ.ಬಿ.ಪಾಟೀಲರ ಜೊತೆ ಹೊಂದಾಣಿಕೆ ಮಾಡಿಕೊಂಡು ಕೊಟ್ಟಿರಬಹುದು. ಜನ ನನ್ನ ಆರಿಸಿ ತಂದಿದ್ದಾರೆ. ಎಂ.ಬಿ.ಪಾಟೀಲರಿಂದ ಬುದ್ಧಿ ಕಲಿಯುವ ಅವಶ್ಯಕತೆ ಇಲ್ಲ’ ಎಂದು ಹೇಳಿದರು.

ಮುಖ್ಯಮಂತ್ರಿ ಸ್ಥಾನದಿಂದ ಇಳಿಸಿರುವ ವಿಷಯದಲ್ಲಿ ಎಂ.ಬಿ.ಪಾಟೀಲ, ಜಮೀರ್ ಅಹ್ಮದ್, ಸತೀಶ ಜಾರಕಿಹೊಳಿ ನನಗೆ ಮೋಸ ಮಾಡಿಲ್ಲ, ಬೆನ್ನಿಗೆ ಚೂರಿ ಹಾಕಿಲ್ಲ ಎಂದು ಸ್ವತಃ ಸಿದ್ದರಾಮಯ್ಯ ಹೇಳಲಿ. ಆಗ ನನ್ನ ಹೇಳಿಕೆ ವಾಪಸ್ ಪಡೆಯುತ್ತೇನೆ’ ಎಂದು ಸವಾಲು ಹಾಕಿದರು.

ಎಂ.ಬಿ.ಪಾಟೀಲರು ಹತಾಷೆಯಾಗಿದ್ದಾರೆ. ನಾಳೆ ಸಿದ್ದರಾಮಯ್ಯ ಸ್ಫೋಟ ಆದರೆ ನನ್ನ ಕ್ಷೇತ್ರದಲ್ಲಿ ಏನಾಗುತ್ತದೆಯೋ ಎಂಬ ಭಯ ಇದೆ. ಆ ಭಯದ ನಿವಾರಣೆಗಾಗಿ ಹೀಗೆ ಮಾಡುತ್ತಿದ್ದಾರೆ’ ಎಂದು ಹೇಳಿದರು.

ಪ್ರಜಾಪ್ರಭುತ್ವ ಎಂದರೆ ಜವಾಬ್ದಾರಿ: ಶಾಸಕ ಕಟಕದೊಂಡ

ವಿಜಯಪುರ: ಪ್ರಜಾಪ್ರಭುತ್ವ ವ್ಯವಸ್ಥೆ ಪ್ರತಿ ಐದು ವರ್ಷಕ್ಕೊಮ್ಮೆ ಮತ ಚಲಾಯಿಸುವುದಲ್ಲ. ಪ್ರಜಾಪ್ರಭುತ್ವ ಎಂದರೆ ಅದೊಂದು ಜವಾಬ್ದಾರಿ ಎಂದು ಶಾಸಕ ವಿಠ್ಠಲ ಕಟಕದೊಂಡ ಹೇಳಿದರು.

ಜಿಲ್ಲಾಡಳಿತ ಮತ್ತು ಸಮಾಜ ಕಲ್ಯಾಣ ಇಲಾಖೆಯಿಂದ ಮಂಗಳವಾರ ನಗರದ ಕಂದಗಲ್ ಹನುಮಂತರಾಯ ರಂಗಮಂದಿರದಲ್ಲಿ ಹಮ್ಮಿಕೊಂಡಿದ್ದ ಅಂತರರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ, ಯುವ ಸಂಸತ್ತು ಸಭೆ ಉದ್ಘಾಟಿಸಿ ಅವರು ಮಾತನಾಡಿದರು.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರತಿಯೊಬ್ಬ ಪ್ರಜೆಯೂ ಹಕ್ಕಿನ ಜೊತೆಗೆ ಜವಾಬ್ದಾರಿ ಬಗ್ಗೆ ತಿಳಿವಳಿಕೆ ಹೊಂದಿರಬೇಕು. ಎಲ್ಲರ ಅಭಿಪ್ರಾಯಗಳನ್ನೆಲ್ಲ ಕ್ರೋಢೀಕರಿಸಿ ಒಮ್ಮತದ ನಿರ್ಣಯ ಕೈಗೊಂಡಾಗ ಅದು ನಿಜವಾದ ಪ್ರಜಾಪ್ರಭುತ್ವವ್ಯವಸ್ಥೆಯಾಗುತ್ತದೆ ಎಂದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಲಕ್ಷ್ಮಣ ನಿಂಬರಗಿ ಮಾತನಾಡಿ, ಈ ದೇಶದ ವೈವಿಧ್ಯತೆಯನ್ನು ಅವಲೋಕಿಸಿ ಡಾ. ಅಂಬೇಡ್ಕರ್ ಸಂವಿಧಾನ ರಚಿಸಿದ್ದಾರೆ



ಎಂದರು.

ಜಿಲ್ಲಾಧಿಕಾರಿ ಡಾ.ಆನಂದ ಕೆ., ಪ್ರಜಾಪ್ರಭುತ್ವ ವ್ಯವಸ್ಥೆ ಎಂಬುದು ಈ ದೇಶದಲ್ಲಿ ಸರ್ವಾಂತರ್ಯಾಮಿಯಾಗಿದೆ. ಈ ದೇಶದಲ್ಲಿ ಯಾವುದೂ ಸುಪ್ರಿಂ ಅಲ್ಲ. ಸಂವಿಧಾನ ಮಾತ್ರವೇ ಸುಪ್ರಿಂ ಆಗಿದೆ ಎಂದು ವ್ಯಾಖ್ಯಾನಿಸಿದರು.

ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ಪತ್ರಿಕೋದ್ಯಮ ಮತ್ತು ಸಮೂಹ ಮಾಧ್ಯಮ ವಿಭಾಗದ ಪ್ರಾಧ್ಯಾಪಕ ಓಂಕಾರ ಕಾಕಡೆ ಮಾತನಾಡಿ, ವಿವಿಧತೆಯಲ್ಲಿ ಏಕತೆ ಹೊಂದಿರುವ ಕೋಟ್ಯಂತರ ಜನರನ್ನು ಒಂದೇ ಸೂರಿನಡಿ ಮುನ್ನಡೆಸುತ್ತಿರುವ ನಮ್ಮ ಸಂವಿಧಾನದ ಕರ್ತೃ ಡಾ. ಬಿ.ಆರ್. ಅಂಬೇಡ್ಕರ್ ಅವರನ್ನು ಈ ದಿನದಂದು ಸ್ಮರಿಸಬೇಕು ಎಂದರು.

ವೈವಿಧ್ಯತೆಯಲ್ಲಿ ಏಕತೆ ರೂಪಿಸಿದ ಶಕ್ತಿ ಸಂವಿಧಾನಕ್ಕಿದೆ.

ವಿವಿಧ ಜಾತಿ, ಸಂಸ್ಕೃತಿ, ಉಡುಗೆ, ತೊಡುಗೆ, ಭಾಷೆಗಳಲ್ಲಿ ಭಿನ್ನತೆಯಿದೆ. ಆದ–ರೆ, ಈ ಎಲ್ಲ ಭಿನ್ನತೆಗಳನ್ನು ಒಗ್ಗೂಡಿಸುವ ಶಕ್ತಿ ಪ್ರಜಾಪ್ರಭುತ್ವಕ್ಕಿದೆ ಎಂದರು. ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ಮಹೇಶ ಪೋತದಾರ ಸಂವಿಧಾನ ಪೀಠಿಕೆ ವಾಚಿಸಿದರು.


ಚಡಚಣದ ಸುಪ್ರಿಯಾ ಬನಸೋಡೆ ಮಾತನಾಡಿದರು.

ವಿಡಿಎ ಅಧ್ಯಕ್ಷ ಗಂಗಾಧರ ಸಂಬಣ್ಣಿ, ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ವಸಂತ ಹೊನಮೊಡೆ. ಜಿ. ಪಂ. ಸಿಇಒ ರಿಷಿ ಆನಂದ್, ವಿಜಯಪುರ ಎ.ಸಿ. ಜುಫಿಶನ್‌ಹಕ್,ಡಿಎಚ್‌ಒಡಾ.ಮಲ್ಲನಗೌಡ ಬಿರಾದಾರ, ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಡಿ.ಜೆ.ಬಿರಾದಾರ, ಪಾಲಿಕೆ ಆಯುಕ್ತ ವಿಜಯ ಮೆಕ್ಕಳಕಿ, ಡೈಟ್ ಪ್ರಾಚಾರ್ಯೆ ಎಸ್.ಎಸ್. ಮುಜಾವರ, ಪ.ಪೂ. ಶಿಕ್ಷಣ ಇಲಾಖೆ ಡಿಡಿಪಿಯು ಕೆ. ಎ. ಉಪ್ಪಾರ, ತಾ.ಪಂ. ಇ.ಒ. ಗುರುಶಾಂತಪ್ಪ ಬೆಳ್ಳುಂಡಗಿ, ಬಿ.ಆರ್.ಬನಸೋಡೆ, ವಿದ್ಯಾವತಿ ಅಂಕಲಗಿ, ಅಡಿವೆಪ್ಪ ಸಾಲಗಲ್, ರಮೇಶ ಆಸಂಗಿ, ಅಶೋಕ ಚಲವಾದಿ, ಚನ್ನು ಕಟ್ಟಿಮನಿ, ಸಿದ್ದು ರಾಯಣ್ಣವರ, ವಿನಾಯಕ ಗುಣಸಾಗರ, ಮಲ್ಲು ಬಿದರಿ, ಭೀಮರಾಯ ಜಿಗಜಿಣಗಿ, ಅಭಿಷೇಕ ಚಕ್ರವರ್ತಿ, ಗಿರೀಶ ಕುಲಕರ್ಣಿ ಇದ್ದರು.

ವಿಜಯಪುರದಲ್ಲಿ ನೇಕಾರ ಸಮ್ಮಾನ್ ಯೋಜನೆಗೆ ಅರ್ಜಿ ಆಹ್ವಾನ

ವಿಜಯಪುರ: ಕೈಮಗ್ಗ ಮತ್ತು ಜವಳಿ ಇಲಾಖೆಯು 2026–27ನೇ ಸಾಲಿನ ನೇಕಾರಸಮ್ಮಾನ್‌ಯೋಜನೆಯಡಿಜಿಲ್ಲೆಯ ಅರ್ಹ ಕೈಮಗ್ಗ ಹಾಗೂ ವಿದ್ಯುತ್ ಮಗ್ಗ ನೇಕಾರರಿಗೆ ವಾರ್ಷಿಕ ? 5 ಸಾವಿರ ಆರ್ಥಿಕ ನೆರವು ನೀಡಲು ಅರ್ಜಿ ಆಹ್ವಾನಿಸಿದೆ. ಸೆ.16ರೊಳಗಾಗಿಅರ್ಜಿಸಲ್ಲಿಸಬಹುದಾಗಿದೆ. ಅರ್ಜಿದಾರರು ಕಡ್ಡಾಯವಾಗಿ ಪ್ರಧಾನ ಮಂತ್ರಿ ಜೀವನ ಜ್ಯೋತಿ ಭೀಮಾ ಯೋಜನೆ ಅಥವಾ ಪ್ರಧಾನ ಮಂತ್ರಿ ಸುರಕ್ಷಾ ಭೀಮಾ ಯೋಜನೆಯಡಿ ನೋಂದಾಯಿಸಿ ಕೊಂಡಿರಬೇಕು. ಹೆಚ್ಚಿನ ಮಾಹಿತಿಗಾಗಿ :9538114434/9611297674 ಸಂಪರ್ಕಿಸಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಬರಪೀಡಿತ ಪ್ರದೇಶ ಘೋಷಣೆಗೆ ಜೆಡಿಎಸ್ ಧರಣಿ, ಶಾಸಕರ ರಾಜೀನಾಮೆಗೆ ಒತ್ತಾಯ



ಯಲಬುರ್ಗಾ:ತಾಲ್ಲೂಕಿನಲ್ಲಿಭೀಕರಬರಪರಿಸ್ಥಿತಿ ಇದ್ದರೂ ಬರಪೀಡಿತ ಪ್ರದೇಶವೆಂದು ಘೋಷಿಸುವಲ್ಲಿ ವಿಫಲವಾಗಿರುವ ರಾಜ್ಯ ಸರ್ಕಾರ ರೈತ ಹಾಗೂ ಜನ ವಿರೋಧಿ ನೀತಿ ಅನುಸರಿಸುತ್ತಿದೆ. ರೈತರ ಹಿತ ಕಡೆಗಣಿಸಿ ಸಂಪೂರ್ಣ ಬೇಜವಾಬ್ದಾರಿತನದಿಂದ ನಡೆದುಕೊಳ್ಳುತ್ತಿರುವ ಸ್ಥಳೀಯ ಶಾಸಕರು ರಾಜೀನಾಮೆ ನೀಡಬೇಕು ಎಂದು ಜಿಲ್ಲಾ ಜೆಡಿಎಸ್ ವಕ್ತಾರ ಮಲ್ಲನಗೌಡ ಕೋನನಗೌಡ ಒತ್ತಾಯಿಸಿದರು.


ಬರಪೀಡಿತ ಪ್ರದೇಶವೆಂದು ಘೋಷಿಸುವಂತೆ ಆಗ್ರಹಿಸಿ ಯಲಬುರ್ಗಾ ಪಟ್ಟಣದಲ್ಲಿ ಹಮ್ಮಿಕೊಂಡಿರುವ ಪ್ರತಿಭಟನೆಯ ನೇತೃತ್ವ ವಹಿಸಿ ಮಾತನಾಡಿದ ಅವರು, ಮಳೆಯ ಅಭಾವದಿಂದ ಬೆಳೆಗಳು ಮೊಳಕೆಯೊಡೆದು ಗೇಣುದ್ದ ಬೆಳೆದು ನಂತರ ಒಣಗಿ ಹೋಗಿವೆ. ಇದರಿಂದ ರೈತರು ಸಾಕಷ್ಟು ನಷ್ಟವನ್ನು ಅನುಭವಿಸಿದ್ದಾರೆ. ಸಾಲ ಸೋಲಮಾಡಿ ಬೀಜ ಮತ್ತು ಗೊಬ್ಬರವನ್ನು ಖರೀದಿಮಾಡಿ ಬಿತ್ತನೆ ಮಾಡಿ ರೈತರಿಗೆ ಪ್ರತಿಫಲ ಅನುಭವಿಸಲು ಸಾಧ್ಯವಾಗಿಲ್ಲ' ಎಂದರು.

ಕ್ಷೇತ್ರದಲ್ಲಿ ಅತಿಥಿ ಶಾಸಕರು ಆಡಳಿತ ನಡೆಸುತ್ತಿರುವುದರಿಂದ ಸಂಪೂರ್ಣ ಆಡಳಿತ ಕುಸಿದಿದೆ.ಆರೇಳುಸಲಶಾಸಕರಾಗಿ,ಸಚಿವರಾಗಿ ಹಾಗೆಯೇ ಸಿಎಂ ಆರ್ಥಿಕ ಸಲಹೆಗಾರರಾಗಿದ್ದ ಬಸವರಾಜ ರಾಯರಡ್ಡಿಯವರ ಮನವಿಗೆ ರಾಜ್ಯ ಸರ್ಕಾರ ಸ್ಪಂದಿಸದೇ ನಿರ್ಲಕ್ಷಿಸುತ್ತಿರುವುದನ್ನು ಗಮನಿಸಿದರೆ ಕ್ಷೇತ್ರದ ಶಾಸಕರು ಆಟಕ್ಕುಂಟು ಲೆಕ್ಕಕ್ಕಿಲ್ಲದಂದಾಗಿದೆ' ಎಂದು ಟೀಕಿಸಿದರು.

ಬಿಜೆಪಿಮುಖಂಡಬಸವರಾಜಗೌರ,ಕರ್ನಾಟಕ ರಕ್ಷಣಾ ವೇದಿಕೆಯ ಅಧ್ಯಕ್ಷ ರಾಜಶೇಖರ ಶ್ಯಾಗೋಟಿ, ಜೆಡಿಎಸ್ ಮುಖಂಡರಾದ ಶರಣಪ್ಪರಾಂಪೂರ,ತಾಲ್ಲೂಕುಘಟಕದಅಧ್ಯಕ್ಷ ಬಸವರಾಜ ಗುಳಗುಳಿ, ಬಿಜೆಪಿ ವಕ್ತಾರ ವೀರಣ್ಣ ಹುಬ್ಬಳ್ಳಿ, ಶಿವಕುಮಾರ ನಾಗಲಾಪೂರಮಠ, ಶಂಭೂ ಜೋಳದ, ಮಹಿಳಾ ಘಟಕದ ಅಧ್ಯಕ್ಷೆ ಸಂತೋಷಿಮಾ ಜ್ಯೋಷಿ, ಡಿ.ಕೆ. ಪರಶುರಾಮ ಸೇರಿ ಅನೇಕರು ಮಾತನಾಡಿ, ರಾಜ್ಯ ಸರ್ಕಾರದ ವಿರುದ್ಧ ಹರಿಹಾಯ್ದರು.

ಮುಖಂಡರಾದಮಾರುತಿಗಾವರಾಳ,ಶರಣಪ್ಪ ಈಳಿಗೇರ, ಶ್ರುತಿ ಪರಶುರಾಮ, ಬಸವರಾಜ ಬೊಮ್ಮನಾಳ ಸೇರಿ ಅನೇಕರು ಹಾಜರಿದ್ದರು.

ಭಾವಕ್ಷರಗಳಲಿ ರೋಹಿಣಿಯ ಕಾವ್ಯ ಪಯಣ



ತವರಾದ ಅಪ್ಪಾ

ಅಮ್ಮಾ ಮರೆಯಾದರೇನು
ಅಪ್ಪಾ ತವರಾದ
ನೋವು ಅವರಿಗೆ ನೂರಿದ್ದರೇನು
ಸಂತೋಷವ ಎನಗೆ ಧಾರೆ ಎರೆದರು

ಅಮ್ಮನಷ್ಟು ಸಮಯ ಕೊಡದಿದ್ದರೂ
ಪ್ರೀತಿಯ ಸಾಗರವೇ ಇವರಾಗಿಹರು
ಕಂಬನಿ ಜಾರದಂತೆ ನೋಡುತ್ತಿಹರು
ಹಗಲಿರುಳೆನ್ನದೆ ದುಡಿಯುತ್ತಿಹರು

ಒಂಬತ್ತು ತಿಂಗಳು ಹೊತ್ತದೇ
ಇರಬಹುದು
ಪ್ರೀತಿಯಿಂದೀಗ ಹೊತ್ತು
ತಿರುಗುವರು
ಮುತ್ತು ಇಟ್ಟು ಮುದ್ದಿಸದೆ
ಇರಬಹುದು
ಬೇಜಾರಾದಾಗ ತುತ್ತು ಕೊಟ್ಟು
ಮಲಗಿಸುವರು

ನೋವಾದಾಗ ಮರೆಯಲ್ಲಿ ಕಣ್ಣೀರು
ಹಾಕಿ
ಅವುಗಳನ್ನೆಲ್ಲ ಪಕ್ಕಕ್ಕೆ ನೂಕಿ
ಅವರ ಆಸೆ ಕನಸುಗಳ ಒಂದೆಡೆ ಸರಿಸಿ
ದುಡಿಯುತ್ತಿಹರು ನಮಗಾಗಿ ಬೆವರು ಸುರಿಸಿ

ಅರ್ಧಾಂಗಿ ಅಗಲಿದ ದು:ಖವಿದ್ದರೂ
ನೆನಪುಗಳ ಇನ್ನೂ ಮರೆಯದಿದ್ದರೂ
ಬೆಟ್ಟದಷ್ಟು ಕಷ್ಟವಿದ್ದರೂ
ತೋರಿಸಿಕೊಳ್ಳದ ನನ್ನ ದೇವರು


*** ***

ಈ ಕವಿತೆ ಹಣೆದವರು ಬೀದರಿನ ಯುವ ಪ್ರತಿಭೆ 'ರೋಹಿಣಿ ಸಿ ಬಿರಾದಾರ್'
ಬಾಲ್ಯದಲ್ಲಿಯೇ ತಾಯಿಯನ್ನು ಕಳೆದುಕೊಂಡು ತಂದೆಯ ಅಕ್ಕರೆಯಲ್ಲಿ ಬೆಳೆದ ರೋಹಿಣಿಯ ಭಾವದಲೆ ಕಾವ್ಯವಾಗಿದ್ದು ಸಹಜವೆನ್ನಿಸಿದರು ಅವಳೊಡಲ ಮಮತೆ ಭಾವಕ್ಷರವಾಗಿ ಹರಿದದ್ದು ಓದುಗನ ಹೃದಯ ತಟ್ಟದೆ ಇರದು.
ಪ್ರಸಕ್ತ ಸಾಲಿನಲ್ಲಿ ತನ್ನ ಮೊದಲು ಕವನ ಸಂಕಲನ ಅಪೂರ್ಣ ವಾತ್ಸಲ್ಯ ಪ್ರಕಟಿಸಿ ಜಿಲ್ಲೆಯ ಸಾಹಿತ್ಯ ಲೋಕದಲ್ಲಿ ಗಟ್ಟಿ ಹೆಜ್ಜೆಯನ್ನಿಟಿದ ರೋಹಿಣಿಯ ಭವಿಷ್ಯ ಉಜ್ವಲವಾಗಲಿ ಎಂದು ಹಾರೈಸುತ್ತ.
ಕೃತಿಯ ಶೀರ್ಷಿಕೆಯಲ್ಲಿಯೆ ತನಗೆ ಪೂರ್ಣವಾದ ವಾತ್ಸಲ್ಯ ದೊರೆತಿಲ್ಲ ಎಂದು ಸೂಚ್ಯವಾಗಿ ತಿಳಿಸುವ ಪರಿ ಕವಿತ್ರಿಯ ಸೂಕ್ಷ್ಮವಾದ ಸಂವೇದನೆ ಶಿಲಕ್ಕೆ ಸಣೆ ಹಿಡಿದಂತಿದೆ, ತಾಯಿಯ ಮಮತೆ ಅಪ್ಪನಲ್ಲಿ ಕಂಡುಕೊಂಡು ಸಮಾಧಾನ ಆಗುವ ಮಗಳ ರೋಧನೆ ಚಳಿಗಾಲದ ಒಲೆಯ ಕಿಚ್ಚಿನಂತೆ ಹಿತವೆನ್ನಿಸಿದಿರೂ ತಾಯಿಯ ಖಾಲಿತನ ಬಹು ಸುಂದರವಾಗಿ ನಿರೂಪಿಸಿ ತಂದೆಯ ತವರು ಎಂದು ಹೇಳಿರುವ ರೀತಿ ಕಣ್ಣು ತೆವಗೊಳಿಸುತ್ತವೆ.
ತಾಯಿಯಿಲ್ಲದ ದಿನಗಳು ಹೇಗೆ ದುಡುತ್ತವೆ ಮನೆ ಹೇಗೆ ಕಾಡುತ್ತದೆ ಎಂಬುದು ತುಂಬಾ ಮಾರ್ಮಿಕವಾಗಿ ಚಿತ್ರಿಸಿದ್ದಾರೆ, ಸುಮಾರು 20 ಕವಿತೆಗಳು ತಾಯಿಯ ಕುರಿತದ್ದೆ ಇವೆ, ಎಲ್ಲವೂ ಒಂದಕಿಂತ ಒಂದು ಭಿನ್ನ ಭಾವದಲೆ ಉಕ್ಕಿಸಿರುವುದು ಕವಯಿತ್ರಿಯ ಪ್ರತಿಭೆಗೆ ಸಾಕ್ಷಿಯಾಗಿವೆ.
ಬದಲಾಗಿದ್ದು ವರ್ಷವಷ್ಟೇ
ಕವನದಲ್ಲಿ ,
ವರ್ಷಕ್ಕೂ ಅಂತ್ಯವಿದೆ
ಈ ಕಷ್ಟಕ್ಕೆ ಅಂತ್ಯವಿಲ್ಲ ಎಂಬ ಹೃದಯದ ಮಿಡಿತ ಪ್ರತಿಯೊಬ್ಬರ ಜೀವನ ತುಡಿತ
ನಾವ್ ಮಿಡಿಲ್ ಕ್ಲಾಸ್ ಮಂದಿ ರೀ ಕವಿತೆಯಲ್ಲಿ ಮಾಧ್ಯಮ ವರ್ಗದ ಜನರ ಬವಣೆ ಎಷ್ಟು ಸೊಗಸಾಗಿ ಹಿಡಿದಿಟ್ಟಿದ್ದಾಳೆ ಕವಯಿತ್ರಿ ಅದ–ರೊಂದು ಸಾಲು ನೋಡಿ
"ನಾವ್ ಮಿಡಿಲ್ ಕ್ಲಾಸ್ ಮಂದಿ ರೀ
ಬಟ್ಟೆ ಬರೆ ತಕ್ಕೊಳಕ್ಕೆ ಮನಸಾದ್ರಾ
ದೊಡ್ಡ ದೊಡ್ಡ ಮಾಲ್ ಗೆ ಹೊಗ್ತೀವ್ರಿ
ಬೆಲೆ ನೋಡಿ ನಮ್ಮಂತೋರ್ಗಲ್ಲ
ಅಂತ ಗೊತ್ತಾದ್ರಾ
ಒಂದು ಪೋಟೋ ತಕ್ಕೊಂಡು
ಮನಿಗಿ ಬಂದು ಸ್ಟೇಟಸ್ ಹಾಕ್ತೀವ್ರಿ"
ಎಷ್ಟು ನೈಜ ಘಟನೆಯನ್ನು ಸಹಜ ಸೊಗಸಾಗಿ ಹೇಳಿದ್ದು ಖುಷಿ ಕೊಡುವುದರೊಂದಿಗೆ ಸಂಸಾರ ಬಂಡಿ ಸಾಗಿಸುವ ಮಾಧ್ಯಮ ವರ್ಗದ ಕಥೆ ವ್ಯಥೆ ವ್ಯಕ್ತವಾಗುತ್ತದೆ.
ಬೀದರನಲ್ಲಿ ಹೊಸ ತಳಿಯ ಮೊಳಕೆಗಳು
ಗಟ್ಟಿ ಬೀಜಕ್ಕೆ ಸಾಕ್ಷಿಯಾಗುತ್ತಿವೆ, ಈ ಫಸಲು ಹೀಗೆ ಬೆಳೆಯಲ್ಲಿ ನಾಡಿನಾದ್ಯಂತ ಸಾಹಿತ್ಯ ಲೋಕದಲ್ಲಿ ಬೀದರ ಜಿಲ್ಲೆಯ ಹೆಸರು ಕೀರ್ತಿ ಬೆಳಗುವಂತಾಗಲಿ ಎಂದು ಹರಸುತ್ತ
ಬೀದರಿನ ಜಂಜಿಗಳಲ್ಲಿ ಸಾಹಿತ್ಯದ ಘಮಲು ಸೂಸುವ ಕೆಲ ಪ್ರತಿಭಾವಂತರು ಹೊರ ಬರುತ್ತಿರುವುದು ಹೆಮ್ಮೆಯ ಸಂಗತಿ ಅಂತಹ ಪ್ರತಿಭಾವಂತರಲ್ಲಿ ರೋಹಿಣಿ ಒಬ್ಬಳು ಎಂಬುದಕ್ಕೆ ಅವಳ ಕವಿತೆಗಳು ಸಾಕ್ಷಿ .
ತುಂಬಾ ಚಂದದ ಮುನ್ನುಡಿ ಬರೆದಿರುವ ಸುನೀತಾ ಪಾಟೀಲರು ಶಿಕ್ಷಕರು ಕವಯಿತ್ರಿಯು ಹೌದು, ಹಾಗೂ ರೋಹಿಣಿಯ ಮಗಳಂತೆ ಪ್ರೀತಿಸಿ ಕೈ ಹಿಡಿದು ಪೋಷಿಸುತ್ತಿರುವ ಅವರ ಕಾಳಜಿ ಮೆಚ್ಚುವಂತದ್ದು,
ರೋಹಿಣಿ mcom ಮುಗಿಸಿ kset ಪರೀಕ್ಷೆಯ ಸಿದ್ಧತೆಯಲ್ಲಿ ಇಹಳು ಅವಳ ಕನಸು ನನಸಾಗಲಿ ತಂಗಿ ನಂದಿನಿಗೆ ತಾಯಿಯ ಪ್ರೀತಿ ಕೊಡುವ ಕವಯಿತ್ರಿ ಎಷ್ಟು ಹೇಳಿದರು ಕಡಿಮೆ
ಹತ್ತಿರದಿಂದ ಬಲ್ಲ ಸುನೀತಾ ಅವರಿಂದ ರೋಹಿಣಿ ಬಗ್ಗೆ ತಿಳಿದುಕೊಂಡದ್ದು , ದ್ವಯರಿಗೂ ಶುಭವಾಗಲಿ ಎಂದು ಹರಸುತ್ತ

***

ರಮೇಶ ಬಿರಾದಾರ
ಹಿರಿಯ ಸಾಹಿತಿಗಳು, ಬೀದರ

ಬೈಕ್ ಕಳ್ಳನ ಬಂಧನ



ಕಲಬುರಗಿ:ಬೈಕ್ ಕಳ್ಳನೊಬ್ಬನನ್ನು ಬಂಧಿಸಿರುವ ಸೇಡಂ ಪೊಲೀಸರು ಮೂರು ಬೈಕ್‌ಗಳನ್ನು ಜಪ್ತಿ ಮಾಡಿದ್ದಾರೆ.

ಬೀದರ್ ಜಿಲ್ಲೆಯ ಚಿಟಗುಪ್ಪ ತಾಲ್ಲೂಕಿನ ಮನ್ನಾಎಖ್ಖೆಳ್ಳಿ ಗ್ರಾಮದ ಇಮ್ತಿಯಾಜ್ ತಂದೆ ಅಬ್ದುಲ್‌ರಶೀದ್‌ಶೇಖ್‌ಎಂಬಾತನನ್ನುಬಂಧಿಸಿ ಮೂರು ಬೈಕ್ ವಶ ಪಡಿಸಿಕೊಂಡಿದ್ದಾರೆ.

ಮನೆಯ ಮುಂದೆ ನಿಲ್ಲಿಸಿದ ಬೈಕ್ ಕಳವಾದ ಬಗ್ಗೆ ಸೇಡಂನ ರೈಲ್ವೆ ಸ್ಟೇಷನ್ ಏರಿಯಾದ ಸುರೇಶ ನಾಯಕ್ ಅವರು ಸೇಡಂ ಪೊಲೀಸ್ ಠಾಣೆಯಲ್ಲಿ ದೂರು ಸಲ್ಲಿಸಿದ್ದರು.

ಈ ದೂರಿನ ಅನ್ವಯ ಸೇಡಂ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಪ್ರಕರಣದ ಪತ್ತೆಗಾಗಿ ಚಿಂಚೋಳಿ ಉಪ ವಿಭಾಗದ ಡಿಎಸ್‌ಪಿ ಸಂಗಮನಾಥ ಎಸ್.ಹಿರೇಮಠ, ಸೇಡಂ ಸಿಪಿಐ ಮಹಾದೇವ ಡಿ.ಅವರ ಮಾರ್ಗದರ್ಶನದಲ್ಲಿ ಪಿಎಸ್‌ಐಗಳಾದ ಉಪೇಂದ್ರಕುಮಾರ, ಶರಣಪ್ಪ ಜಾಕನಳ್ಳಿ ಅವರ ನೇತೃತ್ವದಲ್ಲಿ ಅಪರಾಧ ಪತ್ತೆದಳದ ಸಿಬ್ಬಂದಿಗಳಾದ ನಾಗರಾಜ, ಬಾಲಕೃಷ್ಣ ರೆಡ್ಡಿ, ಶಿವಕುಮಾರ ಮತ್ತು ಸಚಿನ್ ಅವರನ್ನು ಒಳಗೊಂಡ ತಂಡ ರಚಿಸಲಾಗಿತ್ತು. ಈ ತಂಡ ತನಿಖೆ ನಡೆಸಿ ಆರೋಪಿಯನ್ನು ಬಂಧಿಸುವಲ್ಲಿ ಯಶಸ್ವಿಯಾಗಿದೆ. ಕಾರ್ಯಾಚರಣೆಯಲ್ಲಿ ಭಾಗವಹಿಸಿದ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿ ಕಾರ್ಯವನ್ನು ಎಸ್.ಪಿ.ಅಡ್ಡೂರು ಶ್ರೀನಿವಾಸಲು ಅವರು ಶ್ಲಾಘಿಸಿದ್ದಾರೆ.

ಕೊಪ್ಪಳ:ಬರ ಘೋಷಣೆಗೆ ಜೆಡಿಎಸ್ ಪಾದಯಾತ್ರೆ



ಬೆಳಗಟ್ಟಿ (ಅಳವಂಡಿ): ಮಳೆ ಕೊರತೆಯಿಂದ ಕೊಪ್ಪಳ ತಾಲ್ಲೂಕಿನಲ್ಲಿ ಬರಗಾಲ ಪೀಡಿತ ವಾತಾವರಣವಿದ್ದು, ರಾಜ್ಯ ಸರ್ಕಾರ ತಾಲ್ಲೂಕನ್ನು ಬರಪೀಡಿತ ಪಟ್ಟಿಗೆ ಸೇರ್ಪಡೆ ಮಾಡಬೇಕು ಎಂದು ಒತ್ತಾಯಿಸಿ ಜೆಡಿಎಸ್ ಹಮ್ಮಿಕೊಂಡಿರುವ ಎರಡು ದಿನಗಳ ಪಾದಯಾತ್ರೆ ಮಂಗಳವಾರ ತಾಲ್ಲೂಕಿನ ಕೊನೆಯ ಗ್ರಾಮ ಬೆಳಗಟ್ಟಿಯಲ್ಲಿ ಆರಂಭವಾಯಿತು.ಜೆಡಿಎಸ್ ರಾಜ್ಯ ಕೋರ್ ಕಮಿಟಿ ಸದಸ್ಯ ಸಿ.ವಿ. ಚಂದ್ರಶೇಖರ್ ಪಾದಯಾತ್ರೆಯ ನೇತೃತ್ವ ವಹಿಸಿದ್ದು ನ್ಯಾಯಕ್ಕಾಗಿನಡೆಹೆಸರಿನಲ್ಲಿನಡೆಯುತ್ತಿರುವ ಪಾದಯಾತ್ರೆ ಒಟ್ಟು 40 ಕಿ.ಮೀ. ಕ್ರಮಿಸಲಿದೆ. ಬುಧವಾರ ಜಿಲ್ಲಾಕೇಂದ್ರ ಕೊಪ್ಪಳದ ಜಿಲ್ಲಾಡಳಿತ ಭವನದ ತನಕ ಜರುಗಲಿದೆ. ಮೊದಲ ದಿನ ಬೆಳಗಟ್ಟಿಯಿಂದ ಬಿಸರಳ್ಳಿ ಗ್ರಾಮದ ತನಕ ಸಾಗಿತು.

ಬೆಳಗಟ್ಟಿಯ ಕನಕರಾಯ ದೇವಸ್ಥಾನ ಹಾಗೂ ಮುಸ್ತಫಾ ಖಾದ್ರಿ ದರ್ಗಾ ಆವರಣದಿಂದ ಆರಂಭವಾದ ಪಾದಯಾತ್ರೆ ಹಟ್ಟಿ ಕ್ರಾಸ್ ಮೂಲಕ ರಘುನಾಥನಹಳ್ಳಿಯ ಕಡೆಗೆ ಹೆಜ್ಜೆ ಹಾಕಿದರು. ಕಂಪ್ಲಿ, ಮೋರನಾಳ, ಬೆಟಗೇರಿ ಮಾರ್ಗದ ಮೂಲಕ ತೆರಳಿತು. ಮಾಜಿ ಸಚಿವ ವೆಂಕಟರಾವ್ ನಾಡಗೌಡ, ಮಾಜಿ ಶಾಸಕ ರಾಜ ವೆಂಕಟಪ್ಪ ನಾಯಕ ಸೇರಿದಂತೆ ಅನೇಕ ಪ್ರಮುಖರು ಪಾದಯಾತ್ರೆಯಲ್ಲಿ ಪಾಲ್ಗೊಂಡರು.

ಅಳವಂಡಿಗೆ ಸಾಗುವ ಮಾರ್ಗದಲ್ಲಿ ಒಣ–ಗಿದ ಜಮೀನುಗಳಲ್ಲಿ ಕೆಲಸ ಮಾಡುತ್ತಿದ್ದ ರೈತರನ್ನು ನಾಯಕರು ಭೇಟಿಯಾಗಿ ಸಂವಾದ ನಡೆಸಿದರು. ಅಳವಂಡಿಯಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಮರುಳಾರಾಧ್ಯ ಶಿವಾಚಾರ್ಯರು ಸ್ವಾಮೀಜಿ ಮಾತನಾಡಿ ಜನರ ಸಮಸ್ಯೆಗಳಿಗೆ ಸ್ಪಂದಿಸುವ ನಾಯಕರಿಗೆ ಯಶಸ್ಸು ಸಿಗಲಿ ಎಂದು ಹಾರೈಸಿದರು.

ಮೊರನಾಳ ಗ್ರಾಮದಲ್ಲಿ ನಡೆದ ಬಹಿರಂಗ ಸಭೆಯಲ್ಲಿ ಗುಣಮಟ್ಟದ ವಿದ್ಯುತ್ ಪೂ–ರೈಕೆಯ ಕೊರತೆಯಿಂದ ರೈತರು ಮತ್ತು ಜನಸಾಮಾನ್ಯರ ಮೇಲೆ ಆಗಿರುವ ಪರಿಣಾಮವನ್ನು ಪಕ್ಷದ ಮುಖಂಡ ಈಶಪ್ಪ ಮಾದಿನೂರು ವಿವರಿಸಿದರು. ವಿದ್ಯುತ್ ಮತ್ತು ನೀರು ಪೂರೈಕೆ ಸರ್ಕಾರದ ಆದ್ಯ ಕರ್ತವ್ಯವಾಗಿದ್ದು ಇವುಗಳನ್ನು ಪೂರೈಸುವಲ್ಲಿ ಕಾಂಗ್ರೆಸ್ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ ಎಂದು ಆರೋಪಿಸಿದರು.

ಮೊರನಾಳ ಗ್ರಾಮದ ರೈತ ಲಕ್ಷ್ಮಪ್ಪ ಮಗಳದ ಅವರ ಆಹ್ವಾನದ ಮೇರೆಗೆ ಅವರ ಮೂರೂವರೆ ಎಕರೆ ಜಮೀನಿನಲ್ಲಿ ಒಣಗಿದ ಬೆಳೆ ವೀಕ್ಷಿಸಿದರು. ಮಳೆ ಕೊರತೆಯಿಂದಾಗಿ ಸಂಪೂರ್ಣವಾಗಿ ಒಣಗಿರುವ ಬೆಟಗೇರಿ ಕೆರೆಯನ್ನು ವೀಕ್ಷಿಸಿ ಸ್ಥಳೀಯ ಜನರೊಂದಿಗೆ ಸಂವಾದ ನಡೆಸಿದರು.

ಮೈತ್ರಿ ಪಕ್ಷದ ಮುಖಂಡ ಸಂಗಮೇಶ್ ಸುಗ್ರೀವ, ಪಕ್ಷದ ಗೌರವಾಧ್ಯಕ್ಷ ಈಶಪ್ಪ ಮಾದಿನೂರು, ಒಬಿಸಿ ಘಟಕದ ಜಿಲ್ಲಾಧ್ಯಕ್ಷ ಕರಿಯಪ್ಪ ಹಾಲವರ್ತಿ, ಜಿಲ್ಲಾ ಉಪಾಧ್ಯಕ್ಷ ಮೂರ್ತೆಪ್ಪ ಹಿಟ್ನಾಳ ಸೇರಿದಂತೆ ಅನೇಕರು ಪಾಲ್ಗೊಂಡಿದ್ದರು.

ಪ್ರಜಾಪ್ರಭುತ್ವದ ಯಶಸ್ಸು ಯುವಜನರ ಜಾಗೃತಿಯಲ್ಲಿದೆ: ತಹಶೀಲ್ದಾರ್ ಚಂದ್ರಶೇಖರ ಗಾಳಿ



ಕನಕಗಿರಿ: ಪ್ರಜಾಪ್ರಭುತ್ವದ ಯಶಸ್ಸು ಯುವಜನರ ಜಾಗೃತಿ, ಸಂವಿಧಾನದ ಅರಿವು ಮತ್ತು ಮತದಾನದ ಮಹತ್ವವನ್ನುಅರ್ಥಮಾಡಿಕೊಳ್ಳುವುದರಲ್ಲಿದೆ ಎಂದು ತಹಶೀಲ್ದಾರ್ ಚಂದ್ರಶೇಖರ ಗಾಳಿ ಹೇಳಿದರು.

ಪಟ್ಟಣದ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಮಂಗಳವಾರ ಅಂತರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ–2026 ಅಂಗವಾಗಿ ಆಯೋಜಿಸಿದ್ದ ತಾಲೂಕು ಮಟ್ಟದ ಯುವ ಸಂಸತ್ ಸ್ಪರ್ಧೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಸೆಪ್ಟೆಂಬರ್ 15ರಂದು ಆಚರಿಸಲಾಗುವ ಅಂತರಾಷ್ಟ್ರೀಯ ಪ್ರಜಾಪ್ರಭುತ್ವ ದಿನವನ್ನು ಕೇವಲ ಆಚರಣೆಗೆ ಸೀಮಿತಗೊಳಿಸದೆ, ಪ್ರಜಾಪ್ರಭುತ್ವದ ಮೌಲ್ಯಗಳನ್ನು ಪ್ರತಿಯೊಬ್ಬರೂ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಕರೆ ನೀಡಿದರು. ತಾಲೂಕಿನ ಎಲ್ಲ ಕಾಲೇಜು ವಿದ್ಯಾರ್ಥಿಗಳು ಹಾಗೂ ಯುವಜನರು ಇಂತಹ ಕಾರ್ಯಕ್ರಮಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದರು.


ತಾ.ಪಂ. ಇಒ ಕೆ. ರಾಜಶೇಖರ, ಸಮಾಜ ಕಲ್ಯಾಣ ಇಲಾಖೆಯ ಅಧೀಕ್ಷಕ ಡಾ. ಅರವಿಂದ ಲಂಬೂ ಕಾರ್ಯಕ್ರಮದಲ್ಲಿ ಮಾತನಾಡಿದರು.

ಉಪನ್ಯಾಸಕ ಶಿವಪುತ್ರಪ್ಪ ಗಳಪೂಜಿ ವಿಶೇಷ ಉಪನ್ಯಾಸ ನೀಡಿದರು.

ಕಾಲೇಜು ಪ್ರಾಚಾರ್ಯ ಅಮರೇಶ ದೇವರಾಳ, ನಿಲಯಪಾಲಕ ಪಂಪಾನಗೌಡ, ಹುಸೇನಬಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಕಾರ್ಯಕ್ರಮದ ಆರಂಭದಲ್ಲಿ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ, ಸಂವಿಧಾನದ ಪೀಠಿಕೆಯನ್ನು ಸಾಮೂಹಿಕವಾಗಿ ಪಠಿಸಲಾಯಿತು.

ಶಿಕ್ಷಕರು ಉತ್ತಮ ಸಮಾಜದ ನಿರ್ಮಾತೃಗಳು: ದೊಡ್ಡನಗೌಡ ಪಾಟೀಲ



ಕುಷ್ಟಗಿ: 'ಮಕ್ಕಳಿಗೆ ಜ್ಞಾನವನ್ನು ಧಾರೆ ಎರೆದು ಅವರ ವ್ಯಕ್ತಿತ್ವ ರೂಪಿಸುವುದರಿಂದ ಶಿಕ್ಷಕರು ಉತ್ತಮ ಸಮಾಜದ ನಿರ್ಮಾತೃಗಳಾಗಿದ್ದಾರೆ' ಎಂದು ವಿಧಾನಸಭೆ ಪ್ರತಿಪಕ್ಷದ ಮುಖ್ಯಸಚೇತಕ ದೊಡ್ಡನಗೌಡ ಪಾಟೀಲ ಹೇಳಿದರು.

ಪಟ್ಟಣದ ಕ್ರೈಸ್ತದ ಕಿಂಗ್ ಶಾಲೆಯ ಆವರಣದಲ್ಲಿ ಏರ್ಪಡಿಸಿದ್ದ ತಾಲ್ಲೂಕು ಮಟ್ಟದ ಶಿಕ್ಷಕರ ದಿನಾಚರಣೆ ಹಾಗೂ ವೃತ್ತ ಶಿಕ್ಷಕರಿಗೆ ಸನ್ಮಾನ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ತುಂಗಭದ್ರಾ ಕಾಡಾ ಅಧ್ಯಕ್ಷ ಹಸನಸಾಬ ದೋಟಿಹಾಳ ಮಾತನಾಡಿ, 'ವಿದ್ಯಾರ್ಥಿಗೆ ಉತ್ತಮ ಶಿಕ್ಷಣ ದೊರೆತರೆ ಮುಂದೆ ಅವರು ಉನ್ನತ ಸ್ಥಾನಕ್ಕೆ ಏರಬಹುದು ಎಂಬುದಕ್ಕೆ ಮಾಜಿ ರಾಷ್ಟ್ರಪತಿ ಎಪಿಜೆ ಅಬ್ದುಲ್ ಕಲಾಂ ಉತ್ತಮ ಉದಾಹರಣೆ' ಎಂದರು.

ಕಲಾವಿದ ಗಂಗಾವತಿ ಪ್ರಾಣೇಶ, ಧಾರವಾಡದ ಹಿರೇಮಲ್ಲೂರ ಈಶ್ವರನ್ ಕಾಲೇಜಿನ ಉಪನ್ಯಾಸಕ ಜಿ.ಆನಂದ ವಿಶೇಷ ಉಪನ್ಯಾಸ ನೀಡಿದರು. ಹಾಸ್ಯ ಕಲಾವಿದರಾದ ಬಸವರಾಜ ಮಾಮನಿ, ನರಸಿಂಹ ಜೋಷಿ, ಬಿಬಿಒ ಉಮಾದೇವಿ ಬಸಾಪುರ ಇತರರು ಮಾತನಾಡಿದರು.

ಕ್ಷೇತ್ರ ಸಮನ್ವಯಾಧಿಕಾರಿ ಎಂ.ಜಗದೀಶಪ್ಪ, ಶಾಲೆಯ ಫಾದರ್ ಜಾನ್ ಪೀಟರ್, ಎಂ.ಎಂ.ಗೊಣ್ಣಾಗರ ಸೇರಿದಂತೆ ಅನೇಕ ಪ್ರಮುಖರು, ಶಿಕ್ಷಕರ ಸಂಘಗಳ ಪದಾಧಿಕಾರಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಕಾರ್ಗಿಲ್ ಯೋಧ ಮಲ್ಲಯ್ಯ ವೃತ್ತದಿಂದ ಪ್ರಮುಖ ಬೀದಿಗಳಲ್ಲಿ ಡಾ.ಎಸ್. ರಾಧಾಕೃಷ್ಣನ್ ಅವರ ಭಾವಚಿತ್ರದ ಮೆರವಣಿಗೆ ಅದ್ದೂರಿಯಾಗಿ ನೆರವೇರಿತು. ಇದೇ ಸಂದರ್ಭದಲ್ಲಿ ನಿವೃತ್ತ ಶಿಕ್ಷಕರನ್ನು ಸನ್ಮಾನಿಸಲಾಯಿತು.

ಕುಷ್ಟಗಿ–ಬೆಂಗಳೂರು ರೈಲು ಸಂಪರ್ಕ ವಿಸ್ತರಿಸಲು ಪ್ರಲ್ಹಾದ ಜೋಶಿ ಸೂಚನೆ



ಕುಷ್ಟಗಿ: ಪಟ್ಟಣದಿಂದ ಬೆಂಗಳೂರಿಗೆ ಹೋಗುವಪ್ರಯಾಣಿಕರಿಗೆಅನುಕೂಲ ಕಲ್ಪಿಸಲು ಸದ್ಯ ಇರುವ ಹುಬ್ಬಳ್ಳಿ ಬೆಂಗಳೂರು ರೈಲನ್ನು ಕುಷ್ಟಗಿವರೆಗೂ ವಿಸ್ತರಿಸಲು ಪರಿಶೀಲಿಸುವಂತೆ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಹೇಳಿದ್ದಾರೆ.

ಈ ವಿಷಯ ಕುರಿತು ನೈರುತ್ಯ ರೈಲ್ವೆ ವಲಯದ ವ್ಯವಸ್ಥಾಪಕ ನಿರ್ದೇಶಕ.ಪಿ ಅನಂತ ಅವರಿಗೆ ಬರೆದ ಪತ್ರದಲ್ಲಿ ಈ ವಿಷಯ ಪ್ರಸ್ತಾಪಿಸಿರುವ ಜೋಶಿ, ಪಟ್ಟಣದ ನಾಗರಿಕರು, ಹೋರಾಟ ಸಮಿತಿಯವರು ಮನವಿ ಸಲ್ಲಿಸಿ ಒತ್ತಾಯಿಸಿರುವುದರಿಂದ ಅಗತ್ಯ ಕ್ರಮಕ್ಕೆ ಸೂಚಿಸಿದ್ದಾರೆ.

ಸದ್ಯ ಸಂಚರಿಸುತ್ತಿರುವ ಹುಬ್ಬಳ್ಳಿ ಬೆಂಗಳೂರು ಹಾಗೂ ಬೆಳಗಾವಿ ಬೆಂಗಳೂರು ರೈಲುಗಳನ್ನು ತಳಕಲ್ ಜಂಕ್ಷನ್ ಮಾರ್ಗವಾಗಿ ಕುಷ್ಟಗಿಗೆ ಸಂಪರ್ಕ ಕಲ್ಪಿಸಬೇಕು.

ಇದರಿಂದ ಕುಷ್ಟಗಿ ಮತ್ತು ಸುತ್ತಲಿನ ಅನೇಕ ನಗರ ಪಟ್ಟಣಗಳ, ಗ್ರಾಮಾಂತರ ಪ್ರದೇಶದ ಪ್ರಯಾಣಿಕರು ನೇರವಾಗಿ ಬೆಂಗಳೂರಿಗೆ ಪ್ರಯಾಣ ಬೆಳೆಸಲು ಸಾಧ್ಯವಾಗುತ್ತದೆ. ಈ ಬಗ್ಗೆ ಸಂಪರ್ಕಕ್ಕೆ ಇರುವ ಸಾಧ್ಯತೆಗಳನ್ನು ಪರಿಶೀಲಿಸಿ ಶೀಘ್ರಕ್ರಮ ಕೈಗೊಳ್ಳುವಂತೆ ಸೂಚಿಸಿದ್ದಾರೆ.

ಮನವಿ: ಸದ್ಯ ಹುಬ್ಬಳ್ಳಿ?ಕುಷ್ಟಗಿ ಪಟ್ಟಣದ ಮಧ್ಯೆ ಗದಗ ವಾಡಿ ಮಾರ್ಗದಲ್ಲಿ ರೈಲು ಸಂಚರಿಸುತ್ತಿದೆ. ಆದರೆ, ಬೆಂಗಳೂರಿಗೆ ಸಂಪರ್ಕ ಕಲ್ಪಿಸುವಂತೆ ಈ ಭಾಗದ ಜನರು ಮತ್ತು ಇಲ್ಲಿಯ ರೈಲ್ವೆ ಹೋರಾಟ ಸಮಿತಿಯವರು ವರ್ಷದಿಂದಲೂ ರೈಲ್ವೆ ಇಲಾಖೆ ಹಾಗೂ ಕೇಂದ್ರ ರೈಲ್ವೆ ಸಚಿವ ವಿ.ಸೋಮಣ್ಣ ಅವರಿಗೆ ಒತ್ತಾಯಿಸುತ್ತಲೇ ಬಂದಿದ್ದಾರೆ.

ಆದರೆ, ತಾಂತ್ರಿಕ ಕಾರಣಗಳನ್ನು ಮುಂದಿಟ್ಟುಕೊಂಡು ಇಲಾಖೆ ಬೇಡಿಕೆಗೆ ಸ್ಪಂದಿಸಿಲ್ಲವೆಂಬ ಅಸಮಾಧಾನ ಜನರಲ್ಲಿದೆ.

ಅರಣ್ಯ ಸಂರಕ್ಷಣೆ ಪ್ರತಿಯೊಬ್ಬರ ಜವಾಬ್ದಾರಿ: ಮೀನಾಕ್ಷಿ ಬಣ್ಣದ ಭಾವಿ

ಕೊಪ್ಪಳ: ಅರಣ್ಯಗಳು ಮಳೆನೀರಿನ ಸಂರಕ್ಷಣೆ, ಮಣ್ಣಿನ ರಕ್ಷಣೆ, ಜೀವ ವೈವಿಧ್ಯ ಹಾಗೂ ಹವಾಮಾನ ಸಮತೋಲನಕ್ಕೆ ಅತ್ಯಂತ ಅಗತ್ಯವಾಗಿವೆ.

ಪರಿಸರ ಸಂರಕ್ಷಣೆಗಾಗಿ ಅರಣ್ಯಗಳನ್ನು ಉಳಿಸಿ ಬೆಳೆಸುವುದು ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ ಎಂದು ಕೊಪ್ಪಳ ಇನ್ನರ್ ವೀಲ್ ಕ್ಲಬ್ ಅಧ್ಯಕ್ಷೆ ಮೀನಾಕ್ಷಿ ಬಣ್ಣದ ಭಾವಿ ಹೇಳಿದರು.

ತಾಲೂಕಿನ ಕಾಟ್ರಳ್ಳಿ ಗ್ರಾಮದ ದತ್ತು ಪಡೆದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಕೊಪ್ಪಳ ಇನ್ನರ್ ವೀಲ್ ಕ್ಲಬ್ ವತಿಯಿಂದ ಆಯೋಜಿಸಿದ್ದ ರಾಷ್ಟ್ರೀಯ ಅರಣ್ಯ ಹುತಾತ್ಮರ ದಿನಾಚರಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಅರಣ್ಯ ಸಂರಕ್ಷಣೆಗಾಗಿ ತಮ್ಮ ಪ್ರಾಣವನ್ನೇ ತ್ಯಾಗ ಮಾಡಿದ ಅರಣ್ಯ ಇಲಾಖೆ ಅಧಿಕಾರಿಗಳು
ಹಾಗೂ ಸಿಬ್ಬಂದಿಯ ಬಲಿದಾನವನ್ನು ಸ್ಮರಿಸಿ ಅವರಿಗೆ ಪುಷ್ಪಾರ್ಚನೆ ಸಲ್ಲಿಸಿ ಗೌರವ ನಮನ ಸಲ್ಲಿಸಲಾಯಿತು.

ಕಾರ್ಯಕ್ರಮದಲ್ಲಿ ಮಾತನಾಡಿದ ಮೀನಾಕ್ಷಿ ಬಣ್ಣದ ಭಾವಿ, ಅರಣ್ಯ ಸಂರಕ್ಷಣೆಯ ಇತಿಹಾಸದಲ್ಲಿ 1730ರಲ್ಲಿ ರಾಜಸ್ಥಾನದ ಒಂದು ಗ್ರಾಮದಲ್ಲಿ ಮರಗಳನ್ನು ರಕ್ಷಿಸಲು ಅಮೃತಾ ದೇವಿ ಸೇರಿದಂತೆ ನೂರಾರು ಜನರು ತಮ್ಮ ಪ್ರಾಣ ತ್ಯಾಗ ಮಾಡಿದ ಘಟನೆ ಮಹತ್ವದ ಸ್ಥಾನ ಪಡೆದಿದೆ. ಆ ತ್ಯಾಗದ ಸ್ಮರಣಾರ್ಥ ರಾಷ್ಟ್ರೀಯ ಅರಣ್ಯ ಹುತಾತ್ಮರ ದಿನಾಚರಣೆ ಆಚರಿಸಲಾಗುತ್ತಿದೆ ಎಂದು ತಿಳಿಸಿದರು.

ಅರಣ್ಯಹುತಾತ್ಮರ ತ್ಯಾಗವನ್ನುಸ್ಮರಿಸುವುದರ ಜೊತೆಗೆ "ಅರಣ್ಯ ಉಳಿಸಿ, ಪರಿಸರ ಉಳಿಸಿ" ಎಂಬ ಸಂದೇಶವನ್ನು ಪ್ರತಿಯೊಬ್ಬರೂ ಪಾಲಿಸಬೇಕು.

ಪರಿಸರ ಸಂರಕ್ಷಣೆಗಾಗಿ ಅರಣ್ಯಗಳನ್ನು ಉಳಿಸುವುದು ಅತ್ಯಗತ್ಯ ಎಂದು ಅವರು ಹೇಳಿದರು.

ಇದೇ ವೇಳೆ, ಕೊಪ್ಪಳ ಇನ್ನರ್ ವೀಲ್ ಕ್ಲಬ್ ಪರವಾಗಿ ಶಾಲಾ ಆವರಣದಲ್ಲಿ ಸಸಿ ನೆಡುವ ಮೂಲಕ ಪರಿಸರ ಸಂರಕ್ಷಣೆ–ಯ ಕುರಿತು ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸಲಾಯಿತು.

ಕ್ಲಬ್ ಖಜಾಂಚಿಶಿಲ್ಪಾರಾಜುಶಿಮಠಅವರು ವಿದ್ಯಾರ್ಥಿಗಳಿಗೆ ಕ್ರೀಡಾ ಸಾಮಗ್ರಿಗಳನ್ನು ವಿತರಿಸಿ ಪ್ರೋತ್ಸಾಹಿಸಿದರು.

ಕಾರ್ಯಕ್ರಮದಲ್ಲಿ ಕ್ಲಬ್ ಕಾರ್ಯದರ್ಶಿ ಶ್ರೀದೇವಿ ಪಾಟೀಲ, ಐಎಸ್‌ಒ ಲತಾ ಪಟ್ಟಣಶೆಟ್ಟಿ, ಕಾರ್ಯಕಾರಿ ಸಮಿತಿ ಸದಸ್ಯೆ ಶಾರದಾ ದಾದ್ಮಿ, ಹಿರಿಯರಾದ ಡಾ. ರಾಧಾ ಕುಲಕರ್ಣಿ ಸೇರಿದಂತೆ ಶಾಲೆಯ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

PUBLIC FAST KANNADA DAILY NEWS PAPER

ದಿನಾಂಕ : 19–09–2026

ಸಂತ್ರಸ್ತರ ಕಣ್ಣೀರೊರೆಸಿದ ಸಚಿವ ಸತೀಶ್ ಜಾರಕಿಹೊಳಿ



ಬೆಳಗಾವಿ: ಕ್ಷಣಾರ್ಧದಲ್ಲಿ ಒಂದೇ ಕುಟುಂಬದ ನಾಲ್ವರನ್ನು ಬಲಿ ಪಡೆದ ಚವ್ಹಾಟಗಲ್ಲಿಯ ಫ್ರಿಡ್ಜ್ ಸ್ಫೋಟದ ದುರಂತದ ಬೆನ್ನಲ್ಲೇ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಘಟನಾ ಸ್ಥಳಕ್ಕೆ ಭೇಟಿ ನೀಡಿ, ಸಂತ್ರಸ್ತ ಕುಟುಂಬದವರ ನೋವು ಆಲಿಸಿದರು.

ದುರಂತದ ಸ್ಥಳಕ್ಕೆ ಆಗಮಿಸಿದ ಸಚಿವರು, ಘಟನೆಯ ಭೀಕರತೆಯನ್ನು ಪರಿಶೀಲಿಸಿ ಅಧಿಕಾರಿಗಳಿಂದ ಮಾಹಿತಿ ಪಡೆದರು. ಬಳಿಕ ಕುಟುಂಬಸ್ಥರೊಂದಿಗೆ ಮಾತನಾಡಿ, ದುಃಖದಲ್ಲಿ ಅವರೊಂದಿಗೆ ಸರ್ಕಾರ ನಿಲ್ಲಲಿದೆ ಎಂಬ ಭರವಸೆ ನೀಡಿ ಧೈರ್ಯ ತುಂಬಿದರು.

ಈ ವೇಳೆ ಮಾತನಾಡಿದ ಸಚಿವರು, "ಈ ಘಟನೆಗೆ ನಿಖರ ಕಾರಣವೇನು ಎಂಬುದು ತನಿಖೆಯಿಂದ ಹೊರಬರಬೇಕು. ತಪ್ಪು ಯಾರದ್ದೇ ಆಗಿದ್ದರೂ, ವರದಿ ಬಂದ ನಂತರ ಸೂಕ್ತ ಕ್ರಮ ಕೈಗೊಳ್ಳಲಾಗುವುದು" ಎಂದು ಹೇಳಿದರು.

ಘಟನೆಯಲ್ಲಿ ಮೃತಪಟ್ಟವರು ಹಾಗೂ ಗಾಯಗೊಂಡವರ ಕುಟುಂಬಕ್ಕೆ ಸರ್ಕಾರದಿಂದ ದೊರೆಯಬೇಕಾದ ನೆರವು, ಗಾಯಾಳುಗಳ ಚಿಕಿತ್ಸಾ ವ್ಯವಸ್ಥೆ ಹಾಗೂ ಪರಿಹಾರ ಕ್ರಮಗಳ ಕುರಿತು ಜಿಲ್ಲಾಧಿಕಾರಿ ಕಚೇರಿಯಲ್ಲಿ ಸಭೆ ನಡೆಸಿ ಚರ್ಚಿಸಲಾಗುವುದು ಎಂದು ತಿಳಿಸಿದರು.

ಇದೇ ವೇಳೆ ಬೆಳಗಾವಿ ಜಿಲ್ಲೆಯಲ್ಲಿ ಮನೆ ಇಲ್ಲದವರಿಗೆ ನೆರವಾಗುವ ಉದ್ದೇಶದಿಂದ 50 ಸಾವಿರ ನಿವೇಶನಗಳನ್ನು ಒದಗಿಸುವ ಯೋಜನೆ ರೂಪಿಸಲಾಗುತ್ತಿದೆ ಎಂದ ಸಚಿವರು, ಜನರು ತಮ್ಮ ವಾಸಸ್ಥಳ ಬದಲಿಸಲು ಹಿಂದೇಟು ಹಾಕುವ ಪರಿಸ್ಥಿತಿಯನ್ನೂ ಗಮನದಲ್ಲಿಟ್ಟುಕೊಂಡು ಅಧಿಕಾರಿಗಳೊಂದಿಗೆ ಚರ್ಚಿಸಿ ಸೂಕ್ತ ನಿರ್ಧಾರ ಕೈಗೊಳ್ಳಲಾಗುವುದು ಎಂದು ಹೇಳಿದರು.

ಚವ್ಹಾಟಗಲ್ಲಿಯ ದುರಂತಕ್ಕೆ ಕಾರಣವಾದ ಅಂಶಗಳನ್ನು ಪತ್ತೆಹಚ್ಚಿ, ಘಟನೆಯ ಹೊಣೆಗಾರಿಕೆಯನ್ನು ನಿಗದಿಪಡಿಸುವ ನಿಟ್ಟಿನಲ್ಲಿ ಅಧಿಕಾರಿಗಳ ವರದಿಗಾಗಿ ಕಾಯಲಾಗುತ್ತಿದೆ. ವರದಿ ಆಧರಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ಸಚಿವರು ಸ್ಪಷ್ಟಪಡಿಸಿದರು.


ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್, ಪೊಲೀಸ್ ಆಯುಕ್ತ ಪ್ರಕಾಶ್ ನಿಕಂ,ಮೇಯರ್ ಪ್ರೀತಿ ಕಾಮಕರ್ ಸೇರಿದಂತೆ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಉಪಸ್ಥಿತರಿದ್ದರು.

ಜಾಲಹಳ್ಳಿ ಪಶು ಆಸ್ಪತ್ರೆ ಅವ್ಯವಸ್ಥೆ ಖಂಡಿಸಿ ರೈತರಿಂದ ಪ್ರತಿಭಟನೆ

ಜಾಲಹಳ್ಳಿ: 'ಪಟ್ಟಣದಲ್ಲಿರುವ ಪಶು ಆಸ್ಪತ್ರೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ವೈದ್ಯರುಹಾಗೂಸಿಬ್ಬಂದಿನಿಗದಿತಸಮಯಕ್ಕೆ ಆಸ್ಪತ್ರೆಗೆ ಹಾಜರಾಗದೇ ಇರುವುದರಿಂದ ಜಾನುವಾರು ಸಾಕಾಣಿಕೆದಾರರಿಗೆ ಹಾಗೂ ರೈತರಿಗೆ ತುಂಬ ತೊಂದರೆ ಉಂಟಾಗಿದೆ' ಎಂದು ಆರೋಪಿಸಿ ಮಂಗಳವಾರ ಆಸ್ಪತ್ರೆಯ ಅವರಣದಲ್ಲಿ ಕರ್ನಾಟಕ ಪ್ರಾಂತ ರೈತ ಸಂಘಟನೆಯ ನೇತೃತ್ವದಲ್ಲಿ ಪ್ರತಿಭಟನೆ ನಡೆಸಲಾಯಿತು.

ಸಂಘದ ಅಧ್ಯಕ್ಷ ಹನುಮಂತ ಮಡಿವಾಳ ಮಾತನಾಡಿ, 'ಹೆಸರಿಗೆ ಮಾತ್ರವೇ ಪಶು ಆಸ್ಪತ್ರೆ ಇದ್ದು, ಯಾವುದೇ ವೈದ್ಯರು ಇರುವುದಿಲ್ಲ' ಎಂದು ದೂರಿದರು.

ಜಾಲಹಳ್ಳಿ ಸುತ್ತಮುತ್ತಲಿನ ಗ್ರಾಮಗಳಲ್ಲಿ ನೀರಾವರಿ ಇರುವುರಿಂದ ಬಹುತೇಕ



ರೈತರು ಹೈನುಗಾರಿಕೆ ಮಾಡುತ್ತಿದ್ದು, ಅವರ ಜಾನುವಾರಿಗೆ ಆರೋಗ್ಯ ಸಮಸ್ಯೆ ಆದರೆ, ಸರಿಯಾಗಿ ತಪಾಸಣೆ, ಚಿಕಿತ್ಸೆ ನೀಡಲು ವೈದ್ಯರು ಆಸ್ಪತ್ರೆಗೆ ಬರುವುದಿಲ್ಲ. ಅಲ್ಲದೇ ವಿವಿಧ ಯೋಜನೆಯಡಿ ಕಚೇರಿಯಲ್ಲಿ ಮಾಹಿತಿ ನೀಡಲು ಕೆಲಸಕ್ಕೆ ತೆಗೆದುಕೊಂಡ ಸಿಬ್ಬಂದಿ ಚಿಕಿತ್ಸೆ ನೀಡುತ್ತಾರೆ.

ಅಲ್ಲದೇ ಖಾಸಗಿ ವ್ಯಕ್ತಿಗಳು ತಾವು ಪಶು ವೈದ್ಯರು ಎನ್ನುವಂತೆ ಜಾನುವಾರುಗಳಿಗೆ ಚಿಕಿತ್ಸೆ ನೀಡುತ್ತಾರೆ. ಅಂತಹವರನ್ನು ಗುರುತಿಸಿ ತಕ್ಷಣವೇ ಕಾನೂನು ಕ್ರಮ ಜರುಗಿಸಬೇಕೆಂದು ಒತ್ತಾಯಿಸಿದರು.

ಭೇಟಿ: ತಾಲ್ಲೂಕು ಪಶು ವೈದ್ಯಾಧಿಕಾರಿ ಮುತ್ತುರಾಜ ಅವರು ಪ್ರತಿಭಟನೆ ಸ್ಥಳಕ್ಕೆ ಭೇಟಿ ನೀಡಿ, 'ಆಸ್ಪತ್ರೆ ಯಲ್ಲಿನ ಸಮಸ್ಯೆ ಬಗ್ಗೆ ತಿಳಿದುಕೊಳ್ಳಲಾಗಿದೆ. ತಕ್ಷಣವೇ ಮೇಲಧಿಕಾರಿಗಳ ನೇತೃತ್ವದಲ್ಲಿ ಸಭೆ ನಡೆಸಿ ಸೂಕ್ತ ಕ್ರಮ ಜರುಗಿಸಲಾಗುವುದು' ಎಂದು ಲಿಖಿತ ಭರವಸೆ ನೀಡಿದರು.


ಈ ಸಂದರ್ಭದಲ್ಲಿ ಕಾರ್ಯದರ್ಶಿ ರಂಗನಾಥ ನಾಯಕ ಬುಂಕಲದೊಡ್ಡಿ, ರಮೇಶ ತೆಗ್ಗೆಳ್ಳಿ, ನಿಂಗಣ್ಣ ಮಕಾಶಿ, ದುರುಗಪ್ಪ ಹೊರಟ್ಟಿ, ಬಸವರಾಜ ವಂದ್ಲಿ, ಸುರೇಶಗೌಡ, ನರಸಣ್ಣ ಧರೆಪೂರ,ಚಂದ್ರಶೇಖರ,ಶಿವಪ್ಪಚಿಂಚರಕಿ, ಬಸವರಾಜ ಲಿಂಗದಹಳ್ಳಿ, ಮುದ್ದಪ್ಪ ಬಂಡಿ, ಶರಣಪ್ಪ ಕಾರಲಕುಂಟಿ, ನರೇಶ್ ಕುರುಕುಂದಿ ಮತ್ತಿತರರು ಉಪಸ್ಥಿತರಿದ್ದರು.

ರೈಲ್ವೆ ಯೋಜನೆಗೆ ಭೂಸ್ವಾಧೀನ, ಸೂಕ್ತ ಪರಿಹಾರಕ್ಕೆ ರೈತರ ಹೋರಾಟ

ಚನ್ನಮ್ಮನ ಕಿತ್ತೂರು: ಕಿತ್ತೂರು ಮಾರ್ಗ ವಾಗಿ ಧಾರವಾಡ–ಬೆಳಗಾವಿ ನೇರ ರೈಲ್ವೆ ಮಾರ್ಗ ಕಲ್ಪಿಸುವ ಯೋಜನೆಗಾಗಿ ಫಲವತ್ತಾದ ಕೃಷಿ ಭೂಮಿ ಕಳೆದುಕೊಳ್ಳಲಿರುವ ರೈತರಿಗೆ ಸೂಕ್ತ ಪರಿಹಾರ ಘೋಷಣೆ ಮಾಡದಿದ್ದರೆ ಹೋರಾಟ ಹಾದಿ ತುಳಿಯಲಾಗುವುದು ಎಂದು ಭೂಮಿ ಕಳೆದುಕೊಳ್ಳಲಿರುವ ರೈತರು ತೀರ್ಮಾನ ತೆಗೆದುಕೊಂಡಿದ್ದಾರೆ.

ಇಲ್ಲಿಯ ಡೊಂಬರಕೊಪ್ಪ ಪ್ರವಾಸಿ ಮಂದಿರದಲ್ಲಿ ಕಿತ್ತೂರು ಕರ್ನಾಟಕ ರೈತ ಜಾಗೃತಿ ಸಂಘದ ಅಧ್ಯಕ್ಷ ಎಂ. ಎಫ್. ಜಕಾತಿ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಈ ನಿರ್ಧಾರ ಪ್ರಕಟಿಸಲಾಯಿತು.

ಜಕಾತಿ ಮಾತನಾಡಿ, ಒಂದೊಂದು ಭಾಗದವರಿಗೆ ಒಂದೊಂದು ರೀತಿಯ ಪರಿಹಾರ ಧನ ಘೋಷಣೆ ಮಾಡಿರುವ ಸರ್ಕಾರ ರೈತರಿಗೆ ಅನ್ಯಾಯ ಮಾಡಿದೆ. ಹಿರೇಬಾಗೇವಾಡಿ ರೈತರಿಗೆ 45 ಲಕ್ಷ ನಿಗದಿ ಮಾಡಿದ್ದರೆ, ಕಿತ್ತೂರು ಭಾಗದ ರೈತರಿಗೆ ಕೇವಲ 35 ಲಕ್ಷ ನಿಗದಿ ಮಾಡಿರುವುದು ಸರಿಯಲ್ಲ ಎಂದರು.



ಕಬ್ಬು ಹಾಗೂ ಭತ್ತ ಬೆಳೆಯುವ ಫಲವತ್ತಾದ ಭೂಮಿ ಇಲ್ಲಿಯದಾಗಿದೆ. ರೈತರ ಬದು–ಕಿಗೆ ಈ ಕೃಷಿ ಭೂಮಿಯೇ ಮೂಲ ಆಧಾರವಾಗಿದೆ. ಭೂಮಿ ಕಳೆದುಕೊಂಡರೆ ಕೆಲವರಿಗೆ ಮತ್ತೆ ಬೇರೆ ಕಡೆಗೆ ಜಮೀನಿಲ್ಲ.

ಕೆಲವರ ಭೂಮಿಯ ಮಧ್ಯ ಭಾಗದಲ್ಲಿ ರೈಲ್ವೆ ಮಾರ್ಗ ಹಾದು ಹೋಗುತ್ತದೆ. ಆ ಕಡೆಗೆ ಸ್ವಲ್ಪ, ಈ ಕಡೆಗೆ ಸ್ವಲ್ಪ ತುಂಡು ಭೂಮಿ ಉಳಿದುಕೊಳ್ಳುತ್ತದೆ. ರೈಲ್ವೆ ಮಾರ್ಗದ ಆಚೀಚೆ ಸಾಗಿ ಕೃಷಿ ಮಾಡುವುದು ಅಸಾಧ್ಯದ ಮಾತಾಗಿದೆ. ಹಾಗಾಗಿ ಎಕ–ರೆಗೆ ಸರ್ಕಾರ 1 ಕೋಟಿ ಪರಿಹಾರ ಧನ ಘೋಷಣೆ ಮಾಡಬೇಕು ಎಂದು ಅವರು ಒತ್ತಾಯಿಸಿದರು.

ಶಾಸಕ ಬಾಬಾಸಾಹೇಬ ಪಾಟೀಲ, ಜಿಲ್ಲಾಧಿಕಾರಿ ಅವರ ಎದುರು ಸೂಕ್ತ ಪರಿಹಾರಕ್ಕೆ ಆಗ್ರಹಿಸಿ ಮನವಿ ಸಲ್ಲಿಸಿದ್ದೇವೆ. ಅವರೂ ರೈತರಿಗೆ ಭರವಸೆ ನೀಡಿದ್ದರು. ಈಗ ನೋಡಿದರೆ 35 ಲಕ್ಷ ಪರಿಹಾರ ಮೊತ್ತ ಪಡೆಯಲು ದಾಖಲೆ ಸಲ್ಲಿಸುವಂತೆ ನೋಟಿಸು ಹೊರ ಡಿಸಲಾಗಿದೆ. ಈ ಪರಿಹಾರಕ್ಕೆ ರೈತರ ಒಪ್ಪಿಗೆ ಇಲ್ಲ ಎಂದರು.

ಅಬ್ದುಲ್ ರಜಾಕ್ ಗಡಕರಿ ಮಾತ ನಾಡಿ, ರೈಲ್ವೆ ಮಾರ್ಗ ನಿರ್ಮಾಣ ಆಗು ವುದೇ ಬೇರೆ ಕಡೆಗೆ, ಮಾರ್ಗ ನಿರ್ಮಾಣ ಮಾಡುವವರು ರೈತರ ಹೊಲದ ಮಧ್ಯೆದಲ್ಲಿ ಸಿಮೆಂಟ್ ಕಂಬ ತಂದು ಸಂಗ್ರಹ ಮಾಡಿದ್ದಾರೆ. ಅಲ್ಲಿ ಬಿತ್ತನೆ ಮಾಡಲೂ ಆಗುತ್ತಿಲ್ಲ.. ಇಲ್ಲಿಯವರೆಗೆ ಆದ ಹಾನಿಯನ್ನು ಸರ್ಕಾರ ನೀಡಬೇಕು ಎಂದು ಆಗ್ರಹಿಸಿದರು.

ಮುಖಂಡರಾದ ಎಂ. ಎ. ಉಸ್ತಾದ, ಸಾಜೀದಅಲಿ ಜಮಾದಾರ, ಅಣ್ಣಪ್ಪ ಗುಂಜಿ, ಮಕ್ಸೂದ್ ಸೌದಾಗರ, ಶಿವಾ ನಂದ ಹಣಜಿ, ಇಬ್ರಾಹಿಂ ಜಮಾದಾರ, ನಿಂಗಪ್ಪ ಲಕ್ಕುಂಡಿ, ಕಲ್ಲನಗೌಡ ಪಾಟೀಲ, ವಿಠ್ಠಲ ಹಳೇಗೌಡರ, ಸಣ್ಣಫಕ್ಕೀರಗೌಡ ಪಾಟೀಲ ಸುತ್ತಲಿನ ರೈತರು ಭಾಗ ವಹಿಸಿದ್ದರು.

ಬೈಕ್ ಬಸ್ ಡಿಕ್ಕಿ: ಸವದತ್ತಿಯಲ್ಲಿ ಮೂವರ ಸಾವು

ಸವದತ್ತಿ (ಬೆಳಗಾವಿ ಜಿಲ್ಲೆ): ನಗರದ ಹೊರವಲಯದ ಧಾರವಾಡ ರಸ್ತೆಯಲ್ಲಿ ಸೋಮವಾರ ರಾತ್ರಿ ಬೈಕ್ ಹಾಗೂ ಕಲ್ಯಾಣ ಕರ್ನಾಟಕ ಸಾರಿಗೆ ಸಂಸ್ಥೆಯ ಬಸ್ ನಡುವೆ ಸಂಭವಿಸಿದ ಅಪಘಾತದಲ್ಲಿ ಮೂವರು ಬೈಕ್ ಸವಾರರು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಸವದತ್ತಿಯ ವಿನಯ ಜೋಗೆನ್ನವರ (22), ಆಕಾಶ ಜಾಧವ (20) ಹಾಗೂ ರವಿ ಕುರುಬರ (22) ಮೃತರು. ಬಸ್ ಬಸವಕಲ್ಯಾಣದಿಂದ ಹುಬ್ಬಳ್ಳಿಗೆ ಹೊರಟಿತ್ತು. ದ್ವಿಚಕ್ರ ವಾಹನ ಬಸ್‌ಗೆ ಡಿಕ್ಕಿ ಹೊಡೆದು ಕೆಳಗೆ ನುಗ್ಗಿದ್ದರಿಂದ ಮೂವರೂ ಸ್ಥಳದಲ್ಲೇ ಮೃತಪಟ್ಟರು' ಎಂದು ಸವದತ್ತಿ ಪೊಲೀಸರು ತಿಳಿಸಿದ್ದಾರೆ.

ಕಲ್ಲೋಳಿಯ ಪಿಕೆಪಿಎಸ್‌ಗೆ 63.30 ಲಕ್ಷ ನಿವ್ವಳ ಲಾಭ ಪ್ರಕಟ

ಮೂಡಲಗಿ: 'ಕಲ್ಲೋಳಿಯ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘವು 2026 ಮಾರ್ಚ್ ಕೊನೆಯಲ್ಲಿ 63.30 ಲಕ್ಷ ನಿವ್ವಳ ಲಾಭವನ್ನು ಪಡೆದುಕೊಂಡು ಸದಸ್ಯರಿಗೆ ಶೇ 7ರಷ್ಟು ಲಾಭಾಂಶ ಪ್ರಕಟಿಸಿದೆ' ಎಂದು ಸಂಘದ ಅಧ್ಯಕ್ಷ ನೀಲಕಂಠ ಬಸಪ್ಪ ಕಪ್ಪಲಗುದ್ದಿ ಹೇಳಿದರು.

ತಾಲ್ಲೂಕಿನ ಕಲ್ಲೋಳಿಯ ಕೃಷಿ ಪತ್ತಿನ ಸಹಕಾರಿ ಸಂಘದ 113ನೇ ವರ್ಷದ ವಾರ್ಷಿಕ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಸದ್ಯ ಸಂಘವು 2,899 ಸದಸ್ಯರಿದ್ದು ಶೇರು ಬಂಡವಾಳ 2.70 ಕೋಟಿ ಶೇರು ಬಂಡವಾಳ, 6.03 ಕೋಟಿ ನಿಧಿಗಳು, 8.07 ಕೋಟಿ ಗುಂತಾವಣಿಗಳನ್ನು ಹೊಂದಿದ್ದು ಸದಸ್ಯರಿಗೆ 15.69 ಕೋಟಿ ಬೆಳೆ ಸಾಲವನ್ನು, 44.78 ಲಕ್ಷ ಟ್ರ್ಯಾಕ್ಟರ್ ಸಾಲವನ್ನು ಬಿಡಿಸಿಸಿ ಬ್ಯಾಂಕ್ ಮೂಲಕ ನೀಡಲಾಗಿದ್ದು, ಪ್ರಸಕ್ತ ಸಾಲಿನಲ್ಲಿ ಶೇ 100ರಷ್ಟು ಸಾಲ ವಸೂಲಾತಿ ಮಾಡಿದೆ ಎಂದರು. ಉಪಾಧ್ಯಕ್ಷ ಭೀಮಪ್ಪ ವ್ಯಾಪಾರಿ, ನಿರ್ದೇಶಕರಾದ ಬಾಳಪ್ಪ.ಬಿ.ಬೆಳಕೂಡ, ಮಲ್ಲಪ್ಪ ಕಡಾಡಿ, ಆನಂದ ಹೆಬ್ಬಾಳ, ಶಂಕರ ಗೋರೋಶಿ, ಬಸಪ್ಪ ಬಿ.ಪಾಟೀಲ, ಧರೀಶ ಖಾನಗೌಡ್ರ, ಮಹಾದೇವಿ ಖಾನಾಪೂರ, ಕೆಂಪವ್ವ ಗೋರೋಶಿ, ಮಲ್ಲಪ್ಪ ಪೂಜೇರಿ, ಧರ್ಮಣ್ಣ ನಂದಿ,

ಮುಖ್ಯ ಕಾರ್ಯನಿರ್ವಾಹಕ ಮಲ್ಲಪ್ಪ ಹೆಬ್ಬಾಳ, ಮಾನಿಂಗ ಮೇತ್ರಿ ಸೇರಿದಂತೆ ಸಿಬ್ಬಂದಿ ಇದ್ದರು.

ಅಲ್ಲಮಪ್ರಭುದೇವರ ದರ್ಶನ ಪಡೆದ ಉಪಸಭಾಪತಿ
ಪ್ರಾಮಾಣಿಕ ಸೇವೆಯನ್ನು ಪಕ್ಷ ಗುರುತಿಸುತ್ತದೆ–ಉಮಾಶ್ರೀ



ತೇರದಾಳ : ಕ್ಷೇತ್ರಾಧಿಪತಿ ಅಲ್ಲಮ ಪ್ರಭುದೇವರ ದೇವಸ್ಥಾನಕ್ಕೆ ಬುಧವಾರ ವಿಧಾನ ಪರಿಷತ್ ಉಪಸಭಾಪತಿ ಡಾ. ಶ್ರೀಮತಿ ಉಮಾಶ್ರೀ ಭೇಟಿ ನೀಡಿ ವಿಶೇಷ ಪೂಜೆ ಸಲ್ಲಿಸಿ ಆಶೀರ್ವಾದ ಪಡೆದರು. ಉಪಸಭಾಪತಿ ಸ್ಥಾನದ ಅಧಿಕಾರ ಸ್ವೀಕರಿಸಿದ ನಂತರ ಮೊಟ್ಟಮೊದಲ ಬಾರಿಗೆ ಕ್ಷೇತ್ರಕ್ಕೆ ಆಗಮಿಸಿದ ಉಮಾಶ್ರೀ ಅವರನ್ನು ಕಾರ್ಯಕರ್ತರು ಅಭಿನಂದಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಪಕ್ಷದಲ್ಲಿ ಪಕ್ಷ ನಿಷ್ಠೆಗೆ ಮಾತ್ರ ಅವಕಾಶ ಇದ್ದು, ಪ್ರಾಮಾಣಿಕತ ಸೇವೆಯನ್ನು ಪಕ್ಷ ಗುರುತಿಸುತ್ತದೆ. ಆದ್ದರಿಂದಲೇ ತಮಗೆ ಉಪಸಭಾಪತಿಯಂತಹ ಮಹತ್ವದ ಜವಾಬ್ದಾರಿಯ ಸ್ಥಾನ ವಹಿಸಿದೆ ಎಂದು ಹೇಳಿದರು.

ಆ ಸ್ಥಾನದಲ್ಲಿ ಕುಳಿತು ಸತ್ಯದ ಪರವಾಗಿಯೇ ಇರಬೇಕು. ಉಪಸಭಾಪತಿ ಸ್ಥಾನ ಎಂದರೆ ಬಹಳಷ್ಟು ಗಾಂಭಿರ್ಯವಾಗಿ ಇರಬೇಕು.

ಸಾಮಾಜಿಕ ಬದ್ಧತೆಯಿಂದ ಕಾರ್ಯ ನಿರ್ವಹಿಸ ಬೇಕಾಗುತ್ತದೆ ಎಂದು ಅಭಿಮತ ವ್ಯಕ್ತಪಡಿಸಿದರು.

ಮುಖಂಡರಾದ ಶಿವಪ್ಪ ಖವಾಸಿ, ರಾಜು ಹೊಸಮನಿ, ಸುಜೀತ ದಾನಿಗೊಂಡ, ಮಾಸೂಮ್ ಇನಾಮದಾರ, ಗೌತಮ ರೋಡಕರ, ಮಹಾಂತೇಶ ಪಂಚಾಕ್ಷರಿ, ಫೈಯಾಜ್ ಇನಾಮದಾರ, ಸಿದ್ರಾಮ ಕಾಗಿ, ಕಮಲಕ್ಕ ವಾಲಿ, ದಾನಪ್ಪ ಕರೋಲಿ, ಕುಮಾರ ಪಾತ್ರೋಟ, ಮಲ್ಲಪ್ಪ ನಾರಿಗೊಂಡ, ವಿಶ್ವನಾಥ ಹಿರೇಮಠ, ಅಶೋಕ ಉಳ್ಳಾಗಡ್ಡಿ, ಗಣಪತಿ ಗಾಡಿವಡ್ಡರ, ಅಶೋಕ ಕಟಗಿ, ಪರಯ್ಯ ತೆಳಗಿನಮನಿ ಮತ್ತಿತರರು ಉಪಸ್ಥಿತರಿದ್ದರು.

ಅಂತರಾಷ್ಟ್ರೀಯ ಸ್ಪರ್ಧಾತ್ಮಕ ಕ್ರೀಡೆಯಾಗಿ ಬೆಳೆದ ಕುಸ್ತಿ– ಶ್ರೀಮತಿ ಉಮಾಶ್ರೀ
ಚಿಮ್ಮಡ ಗ್ರಾಮದಲ್ಲಿ ಗರಡಿಮನೆ ನಿರ್ಮಾಣಕ್ಕೆ ಭೂಮಿ ಪೂಜೆ

ಚಿಮ್ಮಡ : ಗ್ರಾಮೀಣ ಭಾಗಗಳಲ್ಲಿ ಪಾರಂಪಾರಿಕವಾಗಿ ಆಡುತ್ತಾ ಬಂದಿರುವ ದೇಶದ ಸಾಂಸ್ಕೃತಿಕ ಕ್ರೀಡೆಯಾದ ಕುಸ್ತಿ ಕ್ರೀಡೆ ಬರೀ ದೈಹಿಕ ಸಾಮರ್ಥ್ಯ ಬೆಳೆಸಿಕೊಳ್ಳುವ ಕ್ರೀಡೆಯಾಗಿರದೆ, ಅಂತರಾಷ್ಟ್ರೀಯ ಮಟ್ಟದಲ್ಲಿ ಸ್ಪರ್ಧಾತ್ಮಕ ಕ್ರೀಡೆಯಾಗಿ ಬೆಳೆದು ಬಂದಿದೆ ಎಂದು ವಿಧಾನ ಪರಿಷತ್ ಉಪ ಸಭಾಪತಿ ಶ್ರೀಮತಿ ಡಾ. ಉಮಾಶ್ರೀ ಹೇಳಿದರು.

ಗ್ರಾಮದ ಭೀಮ ನಗರದಲ್ಲಿ (ಜನತಾ ಪ್ಲಾಟ್) 2023–24ನೇಸಾಲಿನಯುವಸಬಲೀಕರಣ ಕ್ರೀಡಾ ಇಲಾಖೆಯ ಹತ್ತು ಲಕ್ಷ ರೂ. ಅನುದಾನದಲ್ಲಿ ನಿರ್ಮಾಣಗೊಳ್ಳಲಿರುವ ಗರಡಿಮನೆ ನಿರ್ಮಾಣಕ್ಕೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದ ಅವರು ಗರಡಿ ಮನೆ ಎಂದರೆ ಶಿಸ್ತು, ಸಂಯಮ, ದೈಹಿಕ ಹಾಗೂ ಮಾನಸಿಕವಾಗಿ ಸಧೃಢತೆಯನ್ನು ಪಡೆಯುವ ಶಾಲೆಯಾಗಿದ್ದು ಸ್ಪರ್ಧಾತ್ಮಕ ಮನೋಭಾವವನ್ನು ಗಟ್ಟಿಗೊಳಿಸಿಕೊಳ್ಳಲು



ಪ್ರತಿಯೊಬ್ಬ ಯುವಕ ಇದರ ಸಹಾಯ ಪಡೆದುಕೊಂಡು ಉತ್ತಮ ಕ್ರೀಡಾಪಟುವಾಗಿ ಹೊರಹೊಮ್ಮಬೇಕಾಗಿದೆ.

ಶಾಸಕ ಸಿದ್ದು ಸವದಿ ಮಾತನಾಡಿ, ತೇರದಾಳ ಮತಕ್ಷೇತ್ರ ಕುಸ್ತಿ ಕ್ರೀಡೆಗೆ ಹೆಸರುವಾಸಿಯಾಗಿದ್ದು, ರಾಷ್ಟ್ರಮಟ್ಟದಲ್ಲಿ ಈ ಭಾಗದ ಬಹಳಷ್ಟು ಕುಸ್ತಿಪಟುಗಳು ಮಿಂಚುತ್ತಿದ್ದಾರೆ. ಗ್ರಾಮದಲ್ಲಿ ಈಗಾಗಲೇ ಎರಡು ಗರಡಿ ಮನೆಗಳಿದ್ದು ಪರಸ್ಪರ ಸಹಕಾರದೊಂದಿಗೆ ಸಾಂಸ್ಕೃತಿಕ ಕ್ರೀಡೆಯಾಗಿರುವ ಕುಸ್ತಿ ಕ್ರೀಡೆಯಲ್ಲಿ ಆಸಕ್ತಿಯಿಂದ ಆಡುವ ಮೂಲಕ ಅಂತರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮಾಡಲಿ ಎಂದು ಹಾರೈಸಿದರು.

ಕಾಂಗ್ರೆಸ್ ಗ್ರಾಮ ಘಟಕದ ಅಧ್ಯಕ್ಷ ಉಮೇಶ ಪೂಜಾರಿ, ಮಹಾಲಿಂಗ ಬಳಗಾರ, ಶ್ರೀಶೈಲ ಮಠಪತಿ, ಅಶೋಕ ಚಿಮ್ಮಡ, ಅಂಬೇಡ್ಕರ ಸಂಘದ ಅಧ್ಯಕ್ಷರಾದ ದಶರಥ ಗೋವಿಂದಗೋಳ, ಪ್ರಭು ದೊಡವಾಡ, ಭೀಮು ಶೀಡ್ಲೆವ್ಗೋಳ ಸೇರಿದಂತೆ ಹಲವಾರು ಜನ ಪ್ರಮುಖರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು. ತೇರದಾಳ ಮತಕ್ಷೇತ್ರದ ಯುವ ಕಾಂಗ್ರೆಸ್ ಅಧ್ಯಕ್ಷ ಪ್ರವೀಣ ಪೂಜಾರಿ ಕಾರ್ಯಕ್ರಮ ನಿರ್ವಹಿಸಿದರು.

ಬಾಗಲಕೋಟ ವಿಕಾಸ ಪತ್ತಿನ ಸಂಘಕ್ಕೆ 37.86 ಲಕ್ಷ ಲಾಭ:
ಸಹಕಾರಿ ಸಂಘಗಳಿಗೆ ಬಡವರ ಆರ್ಥಿಕ ಸ್ಥಿತಿ ಸುಧಾರಿಸುವ ಶಕ್ತಿಯಿದೆ

ಬಾಗಲಕೋಟೆ : ರೈತರು, ಬಡವರು, ಮಧ್ಯಮ ವರ್ಗದವರ ಆರ್ಥಿಕ ಸ್ಥಿತಿ ಸುಧಾರಿಸುವ ಶಕ್ತಿ ಸಹಕಾರಿ ಸಂಘಗಳಿಗೆ ಇದೆ ಎಂದು ವಿದ್ಯಾಗಿರಿಯ ಬಾಗಲಕೋಟ ವಿಕಾಸ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಶಂಕರ ಕೆ.ಪಾಟೀಲ ಹೇಳಿದರು.

ನವನಗರದ ಬಾಪೂಜಿ ಮಲ್ಟಿಸ್ಟೇಟ್ ಕ್ರೆಡಿಟ್ ಸೊಸೈಟಿ ಪ್ರಧಾನ ಕಚೇರಿ ಸಭಾಂಗಣದಲ್ಲಿ ಭಾನುವಾರ ಜರುಗಿದ ಸಂಘದ 11ನೇ ವಾರ್ಷಿಕ ಸರ್ವ ಸಾಧಾರಣ ಸಭೆಯಲ್ಲಿ ಸಂಘದ ಪ್ರಗತಿಯ ನೋಟ ವಿವರಿಸಿದ ಅವರು, ಸದಸ್ಯರು ಹಾಗೂ ಠೇವುದಾರರ ವಿಶ್ವಾಸ ಮತ್ತು ನಂಬಿಕೆಯಿಂದ ಸಂಘ ಪ್ರಗತಿಯೊಂದಿಗೆ ಮುನ್ನಡೆದಿದೆ ಎಂದರು.

2185 ಸದಸ್ಯರನ್ನು ಹೊಂದಿರುವ ಸಂಘ, 1.79 ಕೋಟಿ ರೂ. ಶೇರು ಬಂಡವಾಳ, 30.96 ಕೋಟಿ ರೂ.ಠೇವುಗಳು, 34.12 ಕೋಟಿ ರೂ. ದುಡಿಯುವ ಬಂಡವಾಳ ಹೊಂದಿದ್ದು, 24.85 ಕೋಟಿ ರೂ.ಸಾಲ ವಿತರಣೆ ಮಾಡಿದೆ. ಕಳೆದ ಮಾರ್ಚ ಅಂತ್ಯಕ್ಕೆ 35.86 ಲಕ್ಷ ರೂ.ನಿವ್ವಳ ಲಾಭ ಗಳಿಸಿದೆ. ಷೇರುದಾರರಿಗೆ ಶೇ.10 ರಷ್ಟು ಲಾಭಾಂಶ ಹಂಚಿಕೆ ಮಾಡಲು ತೀರ್ಮಾನಿಸಲಾಗಿದೆ ಎಂದು ಪಾಟೀಲ ಹೇಳಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಉಪಾಧ್ಯಕ್ಷ ರಾಮಪ್ಪ ಕಂಕಾಳೆ, ಸಹಕಾರಿ ಕ್ಷೇತ್ರ ನಂಬಿಕೆ ಮತ್ತು ವಿಶ್ವಾಸದ ಮೇಲೆಯೇ ಬೆಳವಣಿಗೆ ಸಾಧಿಸಿದ್ದು ಆರ್ಥಿಕವಾಗಿ ದುರ್ಬಲರಾಗಿರುವವರಿಗೆ ನೆರವು ನೀಡಿ ಅವರ ಜೀವನಮಟ್ಟ ಸುಧಾರಿಸುವುದೇ ಅದರ ಧ್ಯೇಯವಾಗಿದೆ ಎಂದರು.

ನಿರ್ದೇಶಕ ಡಾ.ವಿಎಸ್.ಚೌಧರಿ ಸಂಘದ ವಾರ್ಷಿಕ ವರದಿಯನ್ನು, ಇನ್ನೋರ್ವ ನಿರ್ದೇಶಕ ಈಶ್ವರ ಕೋನಪ್ಪನವರ 2026–27 ನೇ ಸಾಲಿನ ಅಂದಾಜು ಆಯ–ವ್ಯಯ ಪತ್ರಿಕೆಯನ್ನು ಓದಿದರು.

ಪಿಯುಸಿ ಹಾಗೂ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಿದ ಸಂಘದ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತಲ್ಲದೇ, ಸಂಘದಲ್ಲಿ ಉತ್ತಮ ರೀತಿಯ ವ್ಯವಹಾರ ಮಾಡಿದ ಗ್ರಾಹಕರನ್ನು ಹಾಗೂ ಕಟಗೇರಿಯ ಚಾಮುಂಡಿ ಸಂಜೀವಿನಿ ಮಹಿಳಾ ಒಕ್ಕೂಟದ ಅಧ್ಯಕ್ಷೆ ಭಾಗೀರಥಿ ಮೇಟಿ ಅವರನ್ನು ಸನ್ಮಾನಿಸಲಾಯಿತು. ನಿರ್ದೇಶಕರುಗಳಾದ ಎ.ಎಚ್.ದೇಸಾಯಿ, ಕೆ.ಎಂ.ಚಳಗೇರಿ, ಎಸ್.ಎಸ್.ಗೋಗಿ, ಎಸ್.ಜಿ.ವಿಜಾಪೂರ, ಪಿ.ಎಂ. ಕೊಬ್ರಿ, ಎಸ್.ಬಿ.ಬಳಿಗಾರ, ಎಸ್.ಎಸ್.ಅಂಬೋರೆ, ಎ.ಕೆ.ಪವಾರ, ಎಸ್.ಎಸ್.ಜಂಗಿ ವೇದಿಕೆಯಲ್ಲಿದ್ದರು. ಲಕ್ಷ್ಮೀ ಗೌಡರ ಪ್ರಾರ್ಥಿಸಿದರು. ಸಂಘದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಎಸ್.ಜಿ.ಪಾಟೀಲ ಸ್ವಾಗತಿಸಿದರು. ಎಂ.ಬಿ.ಗೌಡರ ನಿರೂಪಿಸಿದರು.

ರಬಕವಿಯಲ್ಲಿ ಪ್ರಜಾಸೌಧ ಕಟ್ಟಡ ಶಂಕುಸ್ಥಾಪನೆಗೆ ಶೀಘ್ರ ದಿನಾಂಕ ನಿಗದಿ
ಶಾಂತಿ, ಸಹನೆಯಿಂದ ಸಕಲವೂ ಸಾಧ್ಯ– ವೆಂಕನಗೌಡ ಪಾಟೀಲ

ರಬಕವಿ : ಯಾವುದೇ ಗೊಂದಲಗಳಿಗೆ ಒಳಗಾಗಿ ಸಹನೆ ಕಳೆದುಕೊಳ್ಳದೇ ಶಾಂತಿಯುತವಾಗಿ ನಡೆದುಕೊಳ್ಳುವ ಮೂಲಕ ರಬಕವಿಯ ಹಿರಿಯರು ನಮಗೆಲ್ಲರಿಗೂ ಮಾದರಿಯಾಗಿದ್ದಾರೆಂದು ಹೊಸೂರಿನ ಧುರೀಣ ವೆಂಕನಗೌಡ ಪಾಟೀಲ ಹೇಳಿದರು.

ಬುಧವಾರ ರಬಕವಿ–ರಾಮಪುರ, ಹೊಸೂರ ಮತ್ತು ಮದನಮಟ್ಟಿ ಗ್ರಾಮಸ್ಥರಿಂದ ಶಿವದಾಸಿಮಯಯ್ಯ ಸಮುದಾಯ ಭವನದಲ್ಲಿ ನಡೆದ ಸಮಸ್ತ ನಾಗರಿಕರ ಸಭೆಯಲ್ಲಿ ಮಾತನಾಡಿ ಸರ್ಕಾರ ಆದೇಶ ಹೊರಡಿಸಿದ ಜಾಗೆಯಲ್ಲೇ ಪ್ರಜಾಸೌಧ ನಿರ್ಮಾಣವಾಗುವುದು ಖಚಿತವಾಗಿದ್ದು, ಇದರಿಂದ ತಾಲೂಕಿನ ಕೊನೆಯ ಗ್ರಾಮಗಳಿಗೂ ಬಸ್ ನಿಲ್ದಾಣದ ಪಕ್ಕದ ಕಚೇರಿಯಲ್ಲಿಯ ಸಮುಚ್ಚಯ ಉಪಯೋಗಿಯಾಗಲಿದೆಎಂದರು.

ಪ್ರಜಾಸೌಧ ಕಟ್ಟಡ ನಿರ್ಮಾಣಕ್ಕೆ ಸರ್ಕಾರ ಈಗಾಗಲೇ ಆದೇಶ ಹೊರಡಿಸಿದ್ದು, ಸಪ್ಟೆಂಬರ್ ಕೊನೆಯ ವಾರದೊಳಗೆ ಭೂಮಿ ಪೂಜೆ ಕೈಗೊಳ್ಳುವ ದಿನಾಂಕವನ್ನು ಅಧಿಕಾರಿಗಳು ನಿಗದಿ ಪಡಿಸಲಿದ್ದಾರೆ ಎಂದು ಹೋರಾಟ ಸಮಿತಿಯ ರಾಮಣ್ಣ ಮುರಿಗೆಪ್ಪ ಹುಲಕುಂದ ಹೇಳಿದರು.

ಪ್ರಜಾಸೌಧ ವಿಚಾರದಲ್ಲಿ ಯಾವುದೇ ಗೊಂದಲಕ್ಕೆ ಜನರು ಕಿವಿಗೊಡಬಾರದು. ಸರ್ಕಾರ ರಬಕವಿಗೆ ಪ್ರಜಾಸೌಧ ಮಂಜೂರು ಮಾಡಿ ಗೆಜೆಟ್ ಆದೇಶ ಹೊರಡಿಸಿದೆ. ಆದ್ದ–ರಿಂದ ಪಕ್ಕದ ಊರಿನಲ್ಲಿ ಪ್ರಜಾಸೌಧ ನಿರ್ಮಾಣವಾಗಲಿದೆ ಎಂಬ ವದಂತಿಗಳಿಗೆ ಯಾರೂ ಕಿವಿಗೊಡಬಾರದೆಂದರು.

ನಗರದ ಹಿರಿಯರಾದ ನೀಲಕಂಠ ಮುತ್ತೂರ, ಸಂಗಮೇಶ ಮಡಿವಾಳ, ಸಂಗಪ್ಪ ಕುಂದಗೋಳ, ಮಲ್ಲೇಶಪ್ಪ ಕುಚನೂರ,



ಗಿರೀಶ ಮುತ್ತೂರ ಮಾತನಾಡಿ, ಬಹುದಿನಗಳಿಂದ ಸತ್ಯಾಗ್ರಹ ನಿರತ ಬನಹಟ್ಟಿ ಜನರ ಹೋರಾಟಕ್ಕೆ ಸರ್ಕಾರ ಸ್ಪಂದಿಸಿ, ಅವರು ಕೇಳಿದ ಸ್ಥಳದಲ್ಲೇ ಕಟ್ಟಡ ನಿರ್ಮಾಣಕ್ಕೆಸಂಬಂಧಿಸಿದ ಬೇಡಿಕೆಗಳ ದಾಖಲಾತಿಗಳನ್ನು ಸರ್ಕಾರಕ್ಕೆ ಶಿಫಾರಸ್ಸು ಮಾಡುವುದಾಗಿ ಮಾತ್ರ ಕಂದಾಯ ಉಪವಿಭಾಗಾಧಿಕಾರಿ ಶ್ರೀಮತಿ ಶ್ವೇತಾ ಮೋಹನ ಬೀಡಿಕರ ತಿಳಿಸಿದ್ದಾರೆ. ಆದರೆ, ರಬಕವಿ ನಗರಕ್ಕೆ ಪ್ರಜಾಸೌಧ ಮಂಜೂರು ಮಾಡಿ ಸರ್ಕಾರ ಆದೇಶ ಹೊರಡಿಸಿರುವುದರಿಂದ ಈ ಕುರಿತು ಮತ್ತೆ ಚರ್ಚೆ ನಡೆಸುವ ಅಗತ್ಯವಿಲ್ಲ ಎಂದು ಅವರು ಸ್ಪಷ್ಟಪಡಿಸಿದರು.

ಅವಳಿ ನಗರಗಳು ಸಹೋದರತ್ವದಿಂದ ಶತಮಾನಗಳ ಕಾಲದಿಂದ ಬದುಕಿದ್ದು, ಮನೆಯ ಸಹೋದರನೊಬ್ಬ ಮತ್ಸರದಿಂದ ಉಪವಾಸವಿದ್ದಾಗ ಸಂಭ್ರಮಾಚರಣೆ ಬೇಡವೆಂದು ನಿರ್ಧರಿಸಿದ್ದೆವು.

ಆದರೀಗ ಅಧಿಕಾರಿಗಳ ಹೇಳಿಕೆಯಿಂದ ಸಭೆ ನಡೆಸುವ ಅನಿವಾರ್ಯತೆ ಉಂಟಾಯಿತು ಎಂದರು.

ಬಣಗಾರಸಮಾಜದಹಿರಿಯಈಶ್ವರನಾಗರಾಳಮಾತನಾಡಿ, ಅವಳಿ ನಗರದ ಜನರು ಸಹೋದರರಂತೆ ಇರುವುದರಿಂದ ಯಾವುದೇ ವದಂತಿಗಳಿಗೆ ಕಿವಿಗೊಡದೆ ಶಾಂತಿ, ಸಹನೆ ಕಾಪಾಡಬೇಕು. ಈಗಾಗಲೇ ರಬಕವಿಯಲ್ಲಿ ಪ್ರಜಾಸೌಧ ನಿರ್ಮಿಸಲು ಮಂಜೂರಾಗಿದೆ.

ತಹಸೀಲ್ದಾರ ಅವರ ಆರೋಗ್ಯದಲ್ಲಿ ಚೇತರಿಕೆ ಕಂಡು ಬಂದಿದ್ದು, ಅವರು ಕರ್ತವ್ಯಕ್ಕೆ ಮರಳಿದ ಬಳಿಕ ಕಟ್ಟಡದ ಶಂಕುಸ್ಥಾಪನೆ ದಿನಾಂಕವನ್ನು ತಿಳಿಸಲಾಗುವುದು ಎಂದು ಅಧಿಕಾರಿಗಳು ಭರವಸೆ ನೀಡಿದ್ದಾರೆ ಎಂದರು.

ಸಭೆಯಲ್ಲಿ ಹಿರಿಯರಾದ ಡಾ. ಎ.ಕೆ. ನಾಡಗೌಡ ಪಾಟೀಲ ಅಧ್ಯಕ್ಷತೆ ವಹಿಸಿದ್ದರು. ಸಿದ್ದಣ್ಣ ಸಣಕಾಲ, ಉಸ್ಮಾನಸಾಬ್ ಲೇಂಗ್ರೆ, ಮಾರುತಿ ನಾಯಕ, ಧರೆಪ್ಪ ಉಳ್ಳಾಗಡ್ಡಿ, ಸತ್ಯಪ್ಪ ಮಗದುಮ, ಹೊನ್ನಪ್ಪ ಬಿರಡಿ, ಬಸವರಾಜ ಮನ್ನಿ, ಗಣಪತರಾವ ಹಜಾರೆ, ಬಾಬಾಗೌಡ ಪಾಟೀಲ,ಬಸವಪ್ರಭುಹಟ್ಟಿ,ಬಾದಷಾಮುಲ್ಲಾ,ಕೃಷ್ಣಾಲೆಂಡಿ, ಮಹೇಶ ತುಂಗಳ, ಬಾಬು ತೆಳಗಿನಮನಿ, ಮಲ್ಲು ವಂದಾಲ, ರಾಜು ಅಮ್ಮಣಗಿಮಠ, ಎಂ.ಬಿ. ನಾಶಿ, ಮಹಾದೇವ ಧುಪದಾಳ, ಮಹ್ಮದ್ ಮಕಾನದಾರ, ಸುನೀಲ ಬನಹಟ್ಟಿ, ಬುದ್ಧಪ್ಪ ಕುಂದಗೋಳ, ಯಮುನಪ್ಪ ದೊಡಮನಿ, ಸವಿತಾ ಹೊಸೂರ, ನಂದಾ ಕೊಕಟನೂರ, ದಾನಮ್ಮ ಬಾಗಲಮನಿ, ಬಸವರಾಜ ತೆಗ್ಗಿ, ರಾಜೇಂದ್ರ ಶಂಕರರಾವ್ ಮಾಂಡವಕರ, ಸಂಜಯ ತೆಗ್ಗಿ ಹಾಗೂ ಇನ್ನೂ ಅನೇಕರು ಭಾಗವಹಿಸಿದ್ದರು. ಹೊಸೂರ, ರಾಮಪುರ, ರಬಕವಿ, ಮದನಮಟ್ಟಿ ಸುತ್ತಮುತ್ತಲಿನ ಗ್ರಾಮಗಳ ಮಹಿಳೆಯರು ಹಾಗೂ ಸಾರ್ವಜನಿಕರು ಸಭೆಯಲ್ಲಿ ಪಾಲ್ಗೊಂಡು ಸಿಹಿ ಹಂಚಿದರು. ನಂತರ ರಬಕವಿ ನಗರದ ಹೃದಯ ಭಾಗದಲ್ಲಿರುವ ಶಂಕರಲಿಂಗ ವೃತ್ತದಲ್ಲಿ ಪಟಾಕಿ ಸಿಡಿಸಿ ಸಂಭ್ರಮಿಸಲಾಯಿತು.

Printed by Published by ASHWARYA PALLATE on behalf of ASHWARYA PALLATE, Printed at DHARIDEEPA PRINTERS & PUBLISHERS, NO. 74, 4TH MAIN, 7TH CROSS NEAR CHOWDESHWARI TEMPLE, KAVERINAGAR, MAHADEVAPURA, BENGALURU, KARNATAKA - 560048. and Published at BASAVESHWAR CIRCLE, 4TH CROSS, NEKAR NAGAR, HUBLI, OLD HUBLI, DHARWAD, KARNATAKA - 580024. Editor ASHWARYA PALLATE